**5) ತೀರುವ ಮನೆ ಕಾರ್ಯ** (Clearing house): ಭಾರತೀಯ ರಿಜರ್ವ್ ಬ್ಯಾಂಕ್ ತೀರುವೆ ಮನೆಯಾಗಿ ಬ್ಯಾಂಕುಗಳು ತಮ್ಮ ದೈನಂದಿನ ವ್ಯವಹಾರಗಳಲ್ಲಿ ಪರಸ್ಪರ ನೀಡಬೇಕಾದ ಮತ್ತು ತೆಗೆದುಕೊಳ್ಳಬೇಕಾದ ಹಣಕಾಸಿನ ವ್ಯವಹಾರ ಹಾಗೂ ಹಣದ ವರ್ಗಾವಣೆ ಕಾರ್ಯಗಳನ್ನು ನಿರ್ವಹಿಸುತ್ತದೆ. ರಿಜರ್ವ್ ಬ್ಯಾಂಕ್ ಎಲ್ಲ ವಾಣಿಜ್ಯ ಬ್ಯಾಂಕುಗಳ ಮೀಸಲು ನಿಧಿಯನ್ನು ತನ್ನ ಬಳಿ ಹೊಂದಿರುವುದರಿಂದ ವಾಣಿಜ್ಯ ಬ್ಯಾಂಕುಗಳಿಗೆ ಪರಸ್ಪರ ಕೊಡುಕೊಳ್ಳುವ ವ್ಯವಹಾರ ಅಥವಾ ಹಣದ ವರ್ಗಾವಣೆ ಕಾರ್ಯಗಳನ್ನು ರಿಜರ್ವ್ ಬ್ಯಾಂಕಿನ ಮೂಲಕ ಈಡೇರಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಹೀಗೆ ಅಂತರ ಬ್ಯಾಂಕ್ ಸಾಲದ ವ್ಯವಹಾರಗಳನ್ನು ನಗದು ಹಣದ ಬಳಕೆ ಇಲ್ಲದೇ ಪೂರ್ಣಗೊಳಿಸುವುದು ಸಾಧ್ಯವಾಗುತ್ತದೆ.

**6) ಹಣದ ಮಾರುಕಟ್ಟೆಯ ನೇತಾರ** (Leader of money market): ಭಾರತೀಯ ರಿಜರ್ವ್ ಬ್ಯಾಂಕ್ ದೇಶದ ಹಣದ ಮಾರುಕಟ್ಟೆಯ ನೇತಾರನಾಗಿರುತ್ತದೆ. ಹಣದ ಮಾರುಕಟ್ಟೆಯ ವಿವಿಧ ಘಟಕಗಳಾದ ವಾಣಿಜ್ಯ ಬ್ಯಾಂಕುಗಳು, ಹಣಕಾಸಿನ ಸಂಸ್ಥೆಗಳು ಮುಂತಾದವುಗಳ ಚಟುವಟಿಕೆಗಳನ್ನು ಅದು ನಿಯಂತ್ರಿಸುತ್ತದೆ.

**7) ಸಾಲ ನಿಯಂತ್ರಕ** (Controller of credit): ಸಾಲ ನಿಯಂತ್ರಣವು ರಿಜರ್ವ್ ಬ್ಯಾಂಕಿನ ಪ್ರಮುಖವಾದ ಕಾರ್ಯವಾಗಿದೆ. ಸಾಲ ನೀಡಿಕೆ ಹಾಗೂ ಸಾಲದ ಬಳಕೆಗಳು ಯೋಗ್ಯ ಪ್ರಮಾಣ ಹಾಗೂ ಯೋಗ್ಯ ದಿಶೆಯಲ್ಲಿರಬೇಕಾಗುತ್ತದೆ. ಈ ಉದ್ಧೇಶಕ್ಕಾಗಿ ರಿಜರ್ವ್ ಬ್ಯಾಂಕ್ ಸಾಲ ನಿಯಂತ್ರಣ ಕ್ರಮಗಳಾದ ಬ್ಯಾಂಕ್ ದರ ಮುಕ್ತ ಮಾರುಕಟ್ಟೆಯ ವ್ಯವಹಾರ, ಮೀಸಲು ಹಣದ ಅನುಪಾತದಲ್ಲಿ ಬದಲಾವಣೆ ಹಾಗೂ ಆಯ್ಕೆಯ ಪತ್ತಿನ ವಿಧಾನ ಮುಂತಾದವುಗಳನ್ನು ಅನುಸರಿಸುತ್ತದೆ. ಹಣದ ಪೂರೈಕೆ ಹಾಗೂ ಸಾಲಗಳನ್ನು ನಿಯಂತ್ರಿಸುವ ಮೂಲಕ ರಿಜರ್ವ್ ಬ್ಯಾಂಕ್ ಬೆಲೆ, ಬಡ್ಡಿದರ ಮುಂತಾದ ಆರ್ಥಿಕ ಚಲಕಗಳನ್ನು ನಿಯಂತ್ರಿಸುತ್ತದೆ.

**8) ವಿದೇಶ ವಿನಿಮಯದ ಸಂರಕ್ಷಕ** (Custodian of foreign exchange reserves): ಭಾರತೀಯ ರಿಜರ್ವ್ ಬ್ಯಾಂಕ್ ದೇಶದ ವಿದೇಶಿ ವಿನಿಮಯ ಸಂಗ್ರಹದ ಸಂರಕ್ಷಕನಾಗಿ ಕಾರ್ಯ ನಿರ್ವಹಿಸುತ್ತದೆ. ನೋಟುಗಳ ಮುದ್ರಣಕ್ಕೆ ಭದ್ರತೆ ಒದಗಿಸುವುದರ ಜೊತೆಗೆ ಅಂತರರಾಷ್ಟ್ರೀಯ ಪಾವತಿ ಕಾರ್ಯಗಳನ್ನು ಪೂರ್ಣಗೊಳಿಸುವ ಸಲುವಾಗಿ ರಿಜರ್ವ್ ಬ್ಯಾಂಕ್ ಚಿನ್ನ, ಬೆಳ್ಳಿ ಹಾಗೂ ವಿದೇಶಿ ವಿನಿಮಯದ ಸಂಗ್ರಹವನ್ನು ಹೊಂದುವ ಅವಶ್ಯಕತೆ ಇರುತ್ತದೆ. ಆದ್ದರಿಂದ ವಿನಿಮಯ ದರಗಳನ್ನು ಕಾಪಾಡಬೇಕಾಗುತ್ತದೆ. ಮತ್ತು ಸರ್ಕಾರವು ವಿಧಿಸಿದ ವಿನಿಮಯ ನಿಯಂತ್ರಣ ಮತ್ತು ನಿರ್ಬಂಧಗಳನ್ನು ಆಚರಣೆಗೆ ತರುವ ಮೂಲಕ ವಿದೇಶಿ ವಿನಿಮಯದ ಬಳಕೆಯನ್ನು ಮಿತಗೊಳಿಸಿ ರೂಪಾಯಿಯ ಬಾಹ್ಯ ಮೌಲ್ಯದಲ್ಲಿ ಸ್ಥಿರತೆಯನ್ನು ಕಾಪಾಡಬೇಕಾಗುತ್ತದೆ. ಭಾರತೀಯ ರಿಜರ್ವ್ ಬ್ಯಾಂಕ್ ವಿದೇಶಿ ವಿನಿಮಯ ಸಂಗ್ರಹದ ನಿಯಂತ್ರಣ ಹಾಗೂ ಮೇಲ್ವಿಚಾರಣೆ ಮಾಡುವ ಸಲುವಾಗಿ ಒಂದು ಪ್ರತ್ಯೇಕವಾದ ನಿಯಂತ್ರಣ ವಿಭಾಗವನ್ನು ಹೊಂದಿದೆ.

ಬ) **ಅಭಿವೃದ್ಧಿ ಕಾರ್ಯಗಳು** (Developmental functions):

ರಿಜರ್ವ್ ಬ್ಯಾಂಕ್ ಸಾಂಪ್ರದಾಯಕ ಕಾರ್ಯಗಳ ಜೊತೆಗೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತದೆ.

**1) ಕೃಷಿ ಹಣಕಾಸು** (Agricultural finance): ಭಾರತೀಯ ರಿಜರ್ವ್ ಬ್ಯಾಂಕ್ ಕೃಷಿ ಅಭಿವೃದ್ಧಿಗಾಗಿ ಸಹಕಾರಿ ಪತ್ತಿನ ಸಂಘಗಳಿಗೆ ಹಣಕಾಸಿನ ನೆರವು ಹಾಗೂ ಸೂಕ್ತ ಮಾರ್ಗದರ್ಶನ ನೀಡುತ್ತದೆ. ಈ ಉದ್ಧೇಶಕ್ಕಾಗಿ ಮಧ್ಯಮಾವಧಿ ಹಾಗೂ ದೀರ್ಘಾವಧಿ ಹಣಕಾಸನ್ನು ಪೂರೈಸುವ ಸಲುವಾಗಿ ಕೃಷಿ ಸಾಲ ವಿಭಾಗ ಹಾಗೂ ಪ್ರತ್ಯೇಕ ನಿಧಿಯ ವ್ಯವಸ್ಥೆಯನ್ನು ರಿಜರ್ವ್ ಬ್ಯಾಂಕ್ ಮಾಡಿದೆ. ಈಗ ಈ ವಿಭಾಗದ ಕಾರ್ಯ ಮತ್ತು ನಿಧಿಯನ್ನು ರಾಷ್ಟ್ರೀಯ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ(NABARD) ವರ್ಗಾಯಿಸಲಾಗಿದೆ.

**2) ಕೈಗಾರಿಕಾ ಹಣಕಾಸು** (Industrial finance): ಭಾರತೀಯ ರಿಜರ್ವ್ ಬ್ಯಾಂಕ್ ಸಣ್ಣ ಹಾಗೂ ಬೃಹತ್ ಕೈಗಾರಿಕೆಗಳಿಗೆ ರಾಜ್ಯ ಹಣಕಾಸು ನಿಗಮಗಳು (S.F.C), I.F.C.I., I.D.B.I., I.C.I.C.I., ಮುಂತಾದವುಗಳ ಮೂಲಕ ಸಾಲ ಸೌಲಭ್ಯಗಳನ್ನು ಒದಗಿಸುತ್ತದೆ. ಅದರಂತೆ ದೊಡ್ಡ ಪ್ರಮಾಣದ ಕೈಗಾರಿಕೆಗಳಿಗೆ ಹಣಕಾಸಿನ ಸಹಾಯ ಒದಗಿಸಲು 1964ರಲ್ಲಿ ರಾಷ್ಟ್ರೀಯ ಕೈಗಾರಿಕಾ ಸಾಲ ನಿಧಿ(National industrial credit fund)ಯನ್ನು ಸ್ಥಾಪಿಸಿದೆ.

**ಕ) ಇತರ ಕಾರ್ಯಗಳು** (Other functions):

**1) ಸಂಶೋಧನಾ ಕಾರ್ಯಗಳು** (Research functions): ಭಾರತೀಯ ರಿಜರ್ವ್ ಬ್ಯಾಂಕ್ ಆರ್ಥಿಕ ವ್ಯವಸ್ಥೆಯ ಕೃಷಿ, ಕೈಗಾರಿಕೆ, ಹಣಕಾಸು ವಲಯ, ಆಯಾತ ನಿರ್ಯಾತ ಬ್ಯಾಂಕಿಗ್ ವ್ಯವಸ್ಥೆ, ಹಣದ ಮಾರುಕಟ್ಟೆ ಹಾಗೂ ಬಂಡವಾಳ, ಮಾರುಕಟ್ಟೆಯ ಬೆಲೆಗಳ ಸ್ಥಿತಿಗತಿ ಮುಂತಾದವುಗಳ ಕುರಿತು ಮಾಹಿತಿಗಳನ್ನು ಸಂಗ್ರಹಿಸಿ ಪ್ರಕಟಿಸುತ್ತದೆ. ಇಂಥ ಮಾಹಿತಿಗಳ ಆಧಾರದ ಮೇಲೆ ಸರ್ಕಾರವು ತನ್ನ ಆರ್ಥಿಕ ಮತ್ತು ಹಣಕಾಸಿನ ನೀತಿಗಳನ್ನು ರೂಪಿಸಿ ಜಾರಿಗೊಳಿಸಬಹುದಾಗಿದೆ. ಇದರ ಜೊತೆಗೆ ರಿಜರ್ವ್ ಬ್ಯಾಂಕ್ ಕೇಲವು ವಿಶೇಷ ಹೊತ್ತಿಗೆಗಳು (ಬುಲೆಟಿನ್‌ಗಳು), ಲಘು ಪ್ರಕಟಣೆಗಳು ಹಾಗೂ ವಿವಿಧ ಸಂಶೋಧನಾ ಪತ್ರಿಕೆಗಳನ್ನು ಹೊರಡಿಸುತ್ತದೆ.

**2) ವಿಶೇಷ ಕಾರ್ಯಗಳು** (Special functions): ರಿಜರ್ವ್ ಬ್ಯಾಂಕ್ ಹಲವಾರು ವಿಷಯಗಳ ಕುರಿತು ವಿಶೇಷ ಚರ್ಚಾ ಕೂಟಗಳನ್ನು ಹಾಗೂ ಸೇಮಿನಾರಗಳನ್ನು ಏರ್ಪಡಿಸುತ್ತದೆ. ಅದು ಬ್ಯಾಂಕ್ ಸಿಬ್ಬಂದಿಗೆ ತರಬೇತಿ ಸೌಲಭ್ಯಗಳನ್ನು ಒದಗಿಸುತ್ತದೆ. ಅದು ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳೊಂದಿಗೆ ನಿರಂತರ ಸಂಪರ್ಕ ಹೊಂದಿರುತ್ತದೆ. ಬಡತನ, ನಿರುದ್ಯೋಗ, ಅತಿಪ್ರಸರಣ, ಅನಪ್ರಸರಣ ಮುಂತಾದ ಸಮಸ್ಯೆಗಳಿಗೆ ಪರಿಹಾರ ಕ್ರಮಗಳನ್ನು ಅದು ಸೂಚಿಸುತ್ತದೆ,

**ಹಣಕಾಸು ನೀತಿ** (Monetary policy): ಹಣಕಾಸು ನೀತಿಯು ದೇಶದಲ್ಲಿಯ ಒಟ್ಟು ಸಾಲದ ಪ್ರಮಾಣವನ್ನು ನಿಯಂತ್ರಿಸುವ ನೀತಿಯಾಗಿದೆ. ಬ್ಯಾಂಕ್ ನೀಡುವ ಸಾಲದ ಪ್ರಮಾಣ ಹಾಗೂ ಅದರ ದಿಕ್ಕು ಆರ್ಥಿಕ ಚಟುವಟಿಕೆಯ ಮಟ್ಟದ ಮೇಲೆ ಮಹತ್ವದ ಪರಿಣಾಮ ಬೀರುತ್ತದೆ. ಸಾಮಾನ್ಯವಾಗಿ ಅಧಿಕ ಸಾಲವು ಹಣದುಬ್ಬರಕ್ಕೆ ಅವಕಾಶ ಮಾಡಿಕೊಟ್ಟರೆ, ಕಡಿಮೆ ಸಾಲವು ಅನ ಪ್ರಸರಣಕ್ಕೆ ದಾರಿ ಮಾಡಿಕೊಡುತ್ತದೆ. ಹೀಗೆ ಬ್ಯಾಂಕ್ ಸಾಲ ಹಾಗೂ ಹಣದ ಚಲಾವಣೆಯ ವಿಸ್ತರಣೆ ಮತ್ತು ಕುಗ್ಗುವಿಕೆ ಆರ್ಥಿಕ ಚಟುವಟಿಕೆಗಳಲ್ಲಿ ಏರಿಳಿತಗಳನ್ನು ಉಂಟುಮಾಡುತ್ತದೆ. ಸಾಲ ಸೌಲಭ್ಯಗಳ ಅಲಭ್ಯತೆಯು (ಕೊರತೆಯು) ದೇಶದ ಆರ್ಥಿಕ ಅಭಿವೃದ್ಧಿಯನ್ನು ಕುಂಠಿತಗೊಳಿಸುವ ಸಾಧ್ಯತೆ ಇರುತ್ತದೆ. ದೇಶದಲ್ಲಿ ಆರ್ಥಿಕ ಬೆಳವಣಿಗೆ ಮತ್ತು ಸ್ಥಿರತೆಯನ್ನು ಸಾಧಿಸುವ ಸಲುವಾಗಿ ಬ್ಯಾಂಕ್ ಸಾಲದ ಪ್ರಮಾಣ ಹಾಗೂ ದಿಕ್ಕನ್ನು ನಿಯಂತ್ರಿಸುವ ಜವಾಬ್ದಾರಿ ಕೇಂದ್ರ ಬ್ಯಾಂಕಿನ ಮೇಲೆ ಇರುತ್ತದೆ. ಕೇಲವು ನಿರ್ಧಿಷ್ಟ ಆರ್ಥಿಕ ಧ್ಯೆಯೋದ್ಧೇಶಗಳ ಈಡೇರಿಕೆಗಾಗಿ ಹಣ ಹಾಗೂ ಸಾಲಗಳ ಪ್ರಮಾಣವನ್ನು ನಿಯಂತ್ರಿಸುವಲ್ಲಿ ಕೇಂದ್ರ ಬ್ಯಾಂಕ್ ಅನುಸರಿಸುವ ನೀತಿಯನ್ನು ಹಣಕಾಸು ನೀತಿ ಎನ್ನುವರು. ಆರ್.ಪಿ. ಕೆಂಟ್ ಅವರು ಹಣಕಾಸು ನೀತಿಯನ್ನು "ನಿರ್ಧಿಷ್ಟ ಧ್ಯೆಯೋದ್ಧೇಶಗಳ ಸಾಧನೆಯ ಸ್ಪಷ್ಟ ಸಂಕಲ್ಪದೊಂದಿಗೆ ಚಲಾವಣಾ ಹಣದ ಪ್ರಮಾಣವನ್ನು ಹಿಗ್ಗಿಸುವ ಅಥವಾ ಕುಗ್ಗಿಸುವ ಚಟುವಟಿಕೆಯ ನಿರ್ವಹಣೆ" ಎಂದು ವ್ಯಾಖ್ಯಾನಿಸಿದ್ದಾರೆ.

**ಹಣಕಾಸು ನೀತಿಯ ಧ್ಯೆಯೋದ್ಧೇಶಗಳು** (Objectives of monetary policy): ಆರ್ಥಿಕ ವ್ಯವಸ್ಥೆಯ ಅವಶ್ಯಕತೆಗಳಿಗೆ ಅನುಗುಣವಾಗಿ ಬ್ಯಾಂಕುಗಳು ಸಾಲ ನಿರ್ಮಾಣ ಮಾಡುವುದರ ಜೊತೆಗೆ ಸಾಲದ ಹಣವು ಅಪೇಕ್ಷಿತ ವಲಯಗಳಿಗೆ ದೊರೆಯುವಂತೆ ಮಾಡುವ ಸಲುವಾಗಿ ಯೋಗ್ಯ ಹಣಕಾಸು ನೀತಿಯನ್ನು ರಚಿಸುವ ಹೊಣೆಗಾರಿಕೆಯು ರಿಜರ್ವ್ ಬ್ಯಾಂಕಿನ ಮೇಲಿರುತ್ತದೆ. ರಿಜರ್ವ್ ಬ್ಯಾಂಕಿನ ಹಣಕಾಸು ನೀತಿಯ ಪ್ರಮುಖ ಉದ್ಧೇಶಗಳು ಈ ಕೆಳಗಿನಂತಿವೆ.

**1) ತಟಸ್ಥ ಹಣಕಾಸು ನೀತಿ** (Neutral monetary policy): ಭಾರತೀಯ ರಿಜರ್ವ್ ಬ್ಯಾಂಕಿನ ಹಣಕಾಸು ನೀತಿಯ ಉದ್ಧೇಶವು ಬಡ್ಡಿ ದರಗಳಲ್ಲಿ ಏರಿಳಿತಗಳನ್ನು ಕಡಿಮೆಗೊಳಿಸುವ ಮೂಲಕ ಹಣದ ಮಾರುಕಟ್ಟೆಯಲ್ಲಿ ಸ್ಥಿರತೆಯನ್ನು ಸಾಧಿಸುವುದಾಗಿದೆ. ಹಣದ ಬೇಡಿಕೆ ಮತ್ತು ಪೂರೈಕೆಗಳ ನಡುವೆ ಎಲ್ಲ ಸಮಯಗಳಲ್ಲಿ ಸಮತೋಲನ ಸಾಧಿಸುವಂತೆ ಸಾಲ ನಿಯಂತ್ರಣದ ಕ್ರಮಗಳನ್ನು ಜಾರಿಗೊಳಿಸುತ್ತದೆ.

**2) ವಿನಿಮಯ ದರದಲ್ಲಿ ಸ್ಥಿರತೆ** (Exchange rate stability): ವಿನಿಮಯ ದರಗಳಲ್ಲಿಯ ಅಸ್ಥಿರತೆಯು ದೇಶದ ವಿದೇಶಿ ವ್ಯಾಪಾರಕ್ಕೆ ಹಾನಿಕಾರಕವಾಗಿದೆ. ಹೀಗಾಗಿ ಬ್ಯಾಂಕುಗಳು ನೀಡುವ ಸಾಲಗಳನ್ನು ನಿಯಂತ್ರಿಸುವ ಮೂಲಕ ವಿದೇಶಿ ವಿನಿಮಯ ದರಗಳಲ್ಲಿ ಸ್ಥಿರತೆಯನ್ನು ಕಾಪಾಡುತ್ತದೆ.

**3) ಬೆಲೆಗಳಲ್ಲಿ ಸ್ಥಿರತೆ** (Price stability): ಬೆಲೆಗಳ ಏರಿಳಿತಗಳು ಆರ್ಥಿಕ ವ್ಯವಸ್ಥೆಯಲ್ಲಿ ಗೊಂದಲಗಳನ್ನು ಸೃಷ್ಟಿಸುವ ಮೂಲಕ ತೀವ್ರತರ ಪ್ರತಿಕೂಲ ಪರಿಣಾಮಗಳಿಗೆ ಕಾರಣವಾಗುತ್ತದೆ. ಅದುದರಿಂದ ಬೆಲೆಗಳಲ್ಲಿ ಸ್ಥಿರತೆ ಕಾಪಾಡುವುದು ಹಣಕಾಸು ನೀತಿಯ ಪ್ರಮುಖ ಉದ್ದೇಶವಾಗಿದೆ. ಭಾರತೀಯ ರಿಜರ್ವ್ ಬ್ಯಾಂಕ್ ಜನರ ಅವಶ್ಯಕತೆಗಳ ಅನುಗುಣವಾಗಿ ಸಾಲ ನೀಡಿಕೆಯನ್ನು ನಿಯಂತ್ರಿಸುವ ಮೂಲಕ ದೇಶದ ಬೆಲೆಗಳಲ್ಲಿ ಸ್ಥಿರತೆ ಸಾಧಿಸುತ್ತದೆ.

**4) ವ್ಯಾಪಾರಿ ಆವರ್ತಗಳ ನಿಯಂತ್ರಣ** (Control of business cycles): ವ್ಯಾಪಾರಿ ಆವರ್ತಗಳು ಆರ್ಥಿಕ ವ್ಯವಸ್ಥೆಯಲ್ಲಿ ಅಸ್ಥಿರತೆಯನ್ನು ತರುತ್ತವೆ. ರಿಜರ್ವ್ ಬ್ಯಾಂಕಿನ ಹಣಕಾಸು ನೀತಿಯು ಆರ್ಥಿಕ ಏರಿಳಿತಗಳನ್ನು ಹೋಗಲಾಡಿಸಿ ಆರ್ಥಿಕ ಸ್ಥಿರತೆಯನ್ನು ಕಾಪಾಡುವ ಉದ್ದೇಶ ಹೊಂದಿರುತ್ತದೆ.

**5) ಪೂರ್ಣೋದ್ಯೋಗ** (Full Employment): ನಿರುದ್ಯೋಗವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅನಪೇಕ್ಷಿತ ಸಂಗತಿಯಾಗಿರುತ್ತದೆ. ಪೂರ್ಣೋದ್ಯೋಗ ಹಾಗೂ ಅಧಿಕ ತಲಾ ವರಮಾನದೊಂದಿಗೆ ಆರ್ಥಿಕ ಸ್ಥಿರತೆಯನ್ನು ಸಾಧಿಸುವುದು ಹಣಕಾಸು ನೀತಿಯ ಒಂದು ಪ್ರಮುಖ ಉದ್ದೇಶವಾಗಿದೆ ಎಂದು ಪರಿಗಣಿಸಲಾಗಿದೆ. ಪೂರ್ಣೋದ್ಯೋಗದ ಗುರಿಯನ್ನು ಸಾಧಿಸಬೇಕಾದರೆ ಅಗ್ಗದ ಹಣದ ನೀತಿ(cheap money policy)ಯನ್ನು ಅನುಸರಿಸಬೇಕಾಗುತ್ತದೆ.

ಇವುಗಳಲ್ಲದೆ ಆರ್ಥಿಕ ಬೆಳವಣಿಗೆಯನ್ನು ಸಾಧಿಸುವುದು ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸುವುದು ಹಣಕಾಸು ನೀತಿಯ ಉದ್ದೇಶವಾಗಿದೆ.

**ಭಾರತೀಯ ರಿಜರ್ವ ಬ್ಯಾಂಕಿನ ಹಣಕಾಸು ನೀತಿಯ ಸಾಧನಗಳು** (Instruments of monetary policy of the RBI) : ದೇಶದಲ್ಲಿಯ ಹಣದ ಚಲಾವಣೆ ಅಥವಾ ಹಣದ ಪೂರೈಕೆಯನ್ನು ನಿಯಂತ್ರಣ ಮತ್ತು ನಿರ್ದೇಶನ ಮಾಡುವ ಸಲುವಾಗಿ ರಿಜರ್ವ್ ಬ್ಯಾಂಕ್ ಅನುಸರಿಸುವ ವಿವಿಧ ವಿಧಾನಗಳು ಹಣಕಾಸು ನೀತಿಯ ಸಾಧನಗಳು ಅಥವಾ ಸಾಲ ನಿಯಂತ್ರಣದ ಕ್ರಮಗಳಾಗಿರುತ್ತವೆ. ರಿಜರ್ವ್ ಬ್ಯಾಂಕ್ ಅನುಸರಿಸುವ ವಿಧಾನಗಳನ್ನು ಎರಡು ರೀತಿಯಾಗಿ ವಿಂಗಡಿಸಲಾಗಿದೆ.

ಅ) ಪರಿಮಾಣಾತ್ಮಕ ವಿಧಾನಗಳು

ಆ) ಗುಣಾತ್ಮಕ ವಿಧಾನಗಳು.

**ಭಾರತೀಯ ರಿಜರ್ವ ಬ್ಯಾಂಕಿನ ಹಣಕಾಸು ನೀತಿಯ ಸಾಧನಗಳು**

ಪರಿಮಾಣಾತ್ಮಕ ವಿಧಾನಗಳು

1) ಬ್ಯಾಂಕ್ ದರ
2) ಮುಕ್ತ ಮಾರುಕಟ್ಟೆಯ ಕಾರ್ಯಾಚರಣೆ
3) ನಗದು ಮೀಸಲು ಅನುಪಾತ
4) ಶಾಸನಬದ್ಧ ದ್ರವ್ಯತೆಯ ಅನುಪಾತ

ಗುಣಾತ್ಮಕ ವಿಧಾನಗಳು

1) ಅಂಚಿನ ಅಗತ್ಯದ ನಿರ್ಧಾರ
2) ಅನುಭೋಗ ಸಾಲದ ನಿಯಂತ್ರಣ
3) ನಿರ್ದೇಶನಗಳ ಮೂಲಕ ನಿಯಂತ್ರಣ
4) ಸಾಲದ ಪಡಿತರ ಪದ್ಧತಿ
5) ನೇರ ಕ್ರಮ
6) ನೈತಿಕ ಒತ್ತಡ
7) ಪ್ರಚಾರ

**ಅ) ಪರಿಮಾಣಾತ್ಮಕ ವಿಧಾನಗಳು** (Quantitative methods): ಪರಿಮಾಣಾತ್ಮಕ ವಿಧಾನಗಳು ಹಣದ ಪೂರೈಕೆಯ ಪ್ರಮಾಣದ ಮೇಲೆ ನೇರ ಪರಿಣಾಮಗಳನ್ನು ಬೀರುತ್ತವೆ. ಪರಿಮಾಣಾತ್ಮಕ ಕ್ರಮಗಳು ನಿಷ್ಪಕ್ಷಪಾತ ಗುಣಲಕ್ಷಣ

ಹೊಂದಿದ ಎಲ್ಲ ವಿವಿಧ ಚಟುವಟಿಕೆಗಳಿಗೆ ಹಣದ ಹರಿವನ್ನು ವಿಸ್ತರಿಸುವ ಅಥವಾ ನಿಯಂತ್ರಿಸುವ ಉದ್ದೇಶ ಹೊಂದಿರುತ್ತವೆ. ಅವುಗಳೆಂದರೆ:

**1) ಬ್ಯಾಂಕ್ ದರ** (Bank Rate)**:** ಭಾರತೀಯ ರಿಜರ್ವ್ ಬ್ಯಾಂಕ್ ವಾಣಿಜ್ಯ ಬ್ಯಾಂಕುಗಳಿಗೆ ಒದಗಿಸುವ ಹಣಕಾಸು ಅಥವಾ ಸಾಲಗಳಿಗೆ ವಿಧಿಸುವ ಬಡ್ಡಿ ದರವೇ ಬ್ಯಾಂಕ್ ದರವಾಗಿದೆ. ಇದು **"ವಟ್ಟದ ದರ"**(discount rate) ಎಂತಲೂ ಕರೆಯಲ್ಪಡುತ್ತದೆ. ಬ್ಯಾಂಕಿಂಗ್ ವ್ಯವಸ್ಥೆಯು ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳು, I.D.B.I., I.F.C., ಎಕ್ಸಮ್ ಬ್ಯಾಂಕ್ ಹಾಗೂ ಇತರ ಅನುಮೋದಿತ ಹಣಕಾಸಿನ ಸಂಸ್ಥೆಗಳನ್ನು ಒಳಗೊಂಡಿರುತ್ತದೆ. ನೇರವಾಗಿ ಸಾಲ ನೀಡುವ ಮೂಲಕ ಅಥವಾ ಹುಂಡಿಗಳನ್ನು ಮರುವಟಾಯಿಸುವ ಮೂಲಕ ಆರ್.ಬಿ.ಐ. ಹಣಕಾಸನ್ನು ಪೂರೈಸುತ್ತದೆ. ಬ್ಯಾಂಕ್ ದರದ ಹೆಚ್ಚಳವು ವಾಣಿಜ್ಯ ಬ್ಯಾಂಕುಗಳ ಸಾಲ ಪಡೆಯುವ ವೆಚ್ಚವನ್ನು ಹೆಚ್ಚಿಸುತ್ತದೆ. ಇದು ಸಾಲದ ಪ್ರಮಾಣವನ್ನು ನಿಯಂತ್ರಿಸುತ್ತದೆ ಮತ್ತು ಹಣದ ಪೂರೈಕೆಯನ್ನು ನಿಯಂತ್ರಿಸುತ್ತದೆ. ಬ್ಯಾಂಕ್ ದರ ಹೆಚ್ಚಳವು ರಿಜರ್ವ್ ಬ್ಯಾಂಕಿನ ಕಠಿಣ(tight) ಹಣಕಾಸು ನೀತಿಯ ಸಂಕೇತವಾಗಿದೆ. ಆದರೆ ಆರ್ಥಿಕ ವ್ಯವಸ್ಥೆಯ ಅನ ಪ್ರಸರಣವನ್ನು ತಡೆಗಟ್ಟಲು ಬ್ಯಾಂಕ್ ದರವನ್ನು ಕಡಿತಗೊಳಿಸಿದಾಗ ತದ್ವಿರುದ್ಧ ಸನ್ನಿವೇಶ ಉದ್ಭವಿಸುತ್ತದೆ. 2013ರ ಅಕ್ಟೋಬರ 29ರಂದು ಬ್ಯಾಂಕ್ ದರವು ಶೇ 8.75 ರಷ್ಟಿತ್ತು.

**ರೆಪೋ ದರ ಮತ್ತು ರಿವರ್ಸ್ ರೆಪೋ ದರ**

ರೆಪೋ ದರವು ವಾಣಿಜ್ಯ ಬ್ಯಾಂಕುಗಳು ರಿಜರ್ವ್ ಬ್ಯಾಂಕಿನಿಂದ ಪಡೆಯುವ ಅತಿ ಅಲ್ಪಾವಧಿಯ ಸಾಲಗಳ ಮೇಲೆ ವಿಧಿಸುವ ಬಡ್ಡಿ ದರವಾಗಿದೆ. ರೆಪೋ ದರದ ಕಡಿತವು ಅಗ್ಗ ದರದ ಹಣವನ್ನು ಪಡೆಯಲು ವಾಣಿಜ್ಯ ಬ್ಯಾಂಕುಗಳಿಗೆ ಸಹಾಯಕಾರಿಯಾಗಿದೆ. ಅದರಂತೆ ರೆಪೋ ದರದ ಹೆಚ್ಚಳವು ವಾಣಜ್ಯ ಬ್ಯಾಂಕುಗಳ ಸಾಲ ಪಡೆಯುವ ಪ್ರಮಾಣವನ್ನು ಕುಗ್ಗಿಸುತ್ತದೆ. ರಿವರ್ಸ್ ರೆಪೋ ದರವು ವಾಣಿಜ್ಯ ಬ್ಯಾಂಕುಗಳು ರಿಜರ್ವ್ ಬ್ಯಾಂಕಿನಲ್ಲಿ ಇಡುವ ಅಲ್ಪಾವಧಿ ಠೇವಣಿಗಳ ಮೇಲೆ ಕೊಡಲಾಗುವ ಬಡ್ಡಿಯಾಗಿರುತ್ತದೆ. ಆರ್ಥಿಕ ವ್ಯವಸ್ಥೆಯ ದ್ರವ್ಯತೆಯ ಪ್ರಮಾಣವನ್ನು ಕಡಿಮೆ ಮಾಡಲು ರಿಜರ್ವ್ ಬ್ಯಾಂಕ್ ರಿಪೋ ದರವನ್ನು ಬಳಸುತ್ತದೆ. ಹೀಗೆ, ರಿಜರ್ವ್ ಬ್ಯಾಂಕ್ ರೆಪೋ ದರವನ್ನು ಕಡಿಮೆ ಮಾಡುವ ಮೂಲಕ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ದ್ರವ್ಯತೆ(liquidity)ಯನ್ನು ಹೆಚ್ಚಿಸುತ್ತದೆ. ಅದರಂತೆ ರಿವರ್ಸ್ ರೆಪೋ ದರವನ್ನು ಹೆಚ್ಚಿಸುವ ಮೂಲಕ ಬ್ಯಾಂಕಿಂಗ್ ವ್ಯವಸ್ಥೆಯ ದ್ರವ್ಯತೆಯನ್ನು ಕಡಿಮೆಮಾಡುತ್ತದೆ.

**2) ಮುಕ್ತ ಮಾರುಕಟ್ಟೆಯ ಕಾರ್ಯಾಚರಣೆ** (Open market operations)**:** ಮುಕ್ತ ಮಾರುಕಟ್ಟೆಯ ಕಾರ್ಯಾಚರಣೆಯು ಮುಕ್ತ ಮಾರುಕಟ್ಟೆಯಲ್ಲಿ ಸರಕಾರಿ ಭದ್ರತೆ(Government security)ಗಳ ಮಾರಾಟ ಮತ್ತು ಕೊಳ್ಳುವ ಚಟುವಟಿಕೆಗಳನ್ನು ಒಳಗೊಂಡ ಹಣಕಾಸು ನೀತಿಯ ಸಾಧನವಾಗಿದೆ. ರಿಜರ್ವ್ ಬ್ಯಾಂಕ್ ಸಾಲದ ಹರಿವನ್ನು ನಿಯಂತ್ರಿಸುವುದಕ್ಕಾಗಿ ಸರಕಾರಿ ಭದ್ರತೆಗಳನ್ನು ಮಾರಾಟ ಮಾಡುತ್ತದೆ ಹಾಗೂ ಸಾಲದ ಹರಿವನ್ನು ಹೆಚ್ಚಿಸುವ ಸಲುವಾಗಿ ಬ್ಯಾಂಕುಗಳು ಹಾಗೂ ಸಾರ್ವಜನಿಕರಿಂದ ಸರ್ಕಾರಿ ಭದ್ರತೆಗಳನ್ನು ಕೊಳ್ಳುತ್ತದೆ. ರಿಜರ್ವ್ ಬ್ಯಾಂಕು, ಬ್ಯಾಂಕುಗಳು ಹಾಗೂ ಸಾರ್ವಜನಿಕರಿಂದ ಸರ್ಕಾರಿ ಭದ್ರತೆಗಳನ್ನು ಕೊಂಡಾಗ ಸಾಲದ ಹರಿವು ಹೆಚ್ಚಾಗುತ್ತದೆ. ಹಾಗೂ ಅವುಗಳ ಮಾರಾಟದಿಂದ ಸಾಲದ ಹರಿವು ಕಡಿಮೆಯಾಗುತ್ತದೆ. ಹೀಗೆ ಸರ್ಕಾರಿ ಭದ್ರತೆಗಳ ಕೊಳ್ಳುವಿಕೆಯ ಸಾಲವನ್ನು ವಿಸ್ತರಿಸಿದರೆ ಮಾರಾಟವು ಸಾಲವನ್ನು ಕಡಿಮೆಗೊಳಿಸುತ್ತದೆ. ಈ ಪ್ರಕಾರ ರಿಜರ್ವ್ ಬ್ಯಾಂಕ್ ಅತಿಪ್ರಸರಣವಿದ್ದಾಗ ಸರ್ಕಾರಿ ಭದ್ರತೆಗಳನ್ನು ಮಾರುತ್ತದೆ ಹಾಗೂ ಅನಪ್ರಸರಣವಿದ್ದಾಗ ಸರಕಾರಿ ಭದ್ರತೆಗಳನ್ನು ಕೊಳ್ಳುತ್ತದೆ.

**3) ನಗದು ಮೀಸಲು ಅನುಪಾತ** (Cash Reserve Ratio)**:** ವಾಣಿಜ್ಯ ಬ್ಯಾಂಕುಗಳು ತಮ್ಮ ಠೇವಣಿಗಳ ನಿರ್ದಿಷ್ಟ ಶೇಕಡಾವಾರು ಪ್ರಮಾಣವನ್ನು ರಿಜರ್ವ್ ಬ್ಯಾಂಕಿನಲ್ಲಿ ಮೀಸಲಿಡುವುದಕ್ಕೆ ನಗದು ಮೀಸಲು ಅನುಪಾತ

ಎನ್ನುತ್ತೇವೆ. ನಗದು ಮೀಸಲು ಅನುಪಾತದ ಹೆಚ್ಚಳವು ಸಾಲ ಕುಗ್ಗುವಿಕೆಗೆ ಎಡೆಮಾಡಿಕೊಟ್ಟರೆ ಅದರ ಇಳಿಕೆಯು ತದ್ವಿರುದ್ಧಗಳನ್ನು ಬೀರುತ್ತದೆ. ರಿಜರ್ವ್ ಬ್ಯಾಂಕ್ C.R.R.ದ ಪ್ರಮಾಣವನ್ನು ಶೇಕಡಾ 3 ರಿಂದ ಶೇಕಡಾ 15ರ ವರೆಗೆ ಬದಲಾಯಿಸಬಹುದಾಗಿದೆ. 2013ರ ಅಕ್ಟೋಬರ್‌ನಲ್ಲಿ ಸಿ.ಆರ್.ಆರ್. ಪ್ರಮಾಣವು ಶೇಕಡಾ 4 ರಷ್ಟಿತ್ತು.

4) **ಶಾಸನ ಬದ್ಧ ದ್ರವ್ಯತೆಯ ಅನುಪಾತ** (Statutory liquidity ratio): ವಾಣಿಜ್ಯ ಬ್ಯಾಂಕುಗಳು ಸಾರ್ವಜನಿಕರಿಂದ ಸಂಗ್ರಹಿಸಿದ ಒಟ್ಟು ಠೇವಣಿಗಳ ನಿರ್ದಿಷ್ಟ ಶೇಕಡಾವಾರು ಪ್ರಮಾಣವನ್ನು ತಮ್ಮ ಬಳಿಯೇ ಇಟ್ಟುಕೊಳ್ಳುವುದಕ್ಕೆ ಶಾಸನ ಬದ್ದ ದ್ರವ್ಯತೆ ಅನುಪಾತ ಎನ್ನುತ್ತೇವೆ. ಎಸ್.ಎಲ್.ಆರ್. ನಗದು ಹಣ, ಅಮೂಲ್ಯವಾದ ಲೋಹಗಳು ಹಾಗೂ ಬಾಂಡು ಮೊದಲಾದ ಅನುಮೋದಿತ ಭದ್ರತೆ(approved securities)ಗಳಾದ ಬಾಂಡು ಮುಂತಾದವುಗಳ ರೂಪದಲ್ಲಿ ಇರಬಹುದಾಗಿದೆ. ಪ್ರಸ್ತುತ ಎಸ್.ಎಲ್.ಆರ್. ಪ್ರಮಾಣವು ಶೇಕಡಾ 23ರಷ್ಟು ಇರುವುದು. ಭಾರತದ ರಿಜರ್ವ್ ಬ್ಯಾಂಕ್ ಎಸ್.ಎಲ್.ಆರ್.ನ್ನು ಶೇಕಡಾ 25 ರಿಂದ 45ರವರೆಗೆ ಬದಲಾಯಿಸ ಬಹುದು.

ಬ) **ಗುಣಾತ್ಮಕ ಕ್ರಮಗಳು** (Qualitative methods): ಗುಣಾತ್ಮಕ ಅಥವಾ ಆಯ್ಕೆಯ ವಿಧಾನಗಳು ಪರೋಕ್ಷವಾಗಿ ಹಾಗೂ ವಿವೇಚನಾಯುತವಾಗಿ ಹಣದ ಪೂರೈಕೆಯ ಮೇಲೆ ಪರಿಣಾಮ ಬೀರುತ್ತವೆ. ಈ ವಿಧಾನಗಳು ಹಣದ ಪೂರೈಕೆಯು ಅಪೇಕ್ಷಿತ ಚಟುವಟಿಕೆಗಳಿಗೆ ಸಾಗುವಂತೆ ಮಾಡುವುದಲ್ಲದೆ ಅನಪೇಕ್ಷಿತ ಚಟುವಟಿಕೆಗಳಿಗೆ ಹಣ ಹರಿದು ಹೋಗುವುದನ್ನು ತಡೆಯುತ್ತವೆ. ಉದಾಹರಣೆಗೆ ಕೃಷಿ ಚಟುವಟಿಕೆಗಳಿಗೆ ಕಡಿಮೆ ಬಡ್ಡಿದರದ ಸಾಲ ಪೂರೈಸುವ ಮೂಲಕ ಅದರ ಬೆಳವಣಿಗೆಯನ್ನು ಉತ್ತೇಜಿಸಬಹುದಾಗಿದೆ. ಇತರ ವಲಯಗಳ ಸಾಲಗಳ ಮೇಲೆ ಮೊದಲಿನ ಬಡ್ಡಿದರಗಳನ್ನು ಮುಂದುವರಿಸಬಹುದಾಗಿದೆ.

1) **ಸಾಲದ ಅಂಚಿನ ಅಗತ್ಯತೆಗಳನ್ನು ನಿರ್ಧರಿಸುವುದು** (Margin Requirements): ವಾಣಿಜ್ಯ ಬ್ಯಾಂಕುಗಳು ಕೆಲವು ಭದ್ರತೆಗಳ (securities) ಆಧಾರದ ಮೇಲೆ ಸಾಲಗಳನ್ನು ಮಂಜೂರು ಮಾಡುತ್ತವೆ. ಬ್ಯಾಂಕುಗಳು ನೀಡುವ ಸಾಲವು ಭದ್ರತೆಗಳ ಮಾರುಕಟ್ಟೆ ಮೌಲ್ಯದ ಒಂದು ಭಾಗವಾಗಿರುತ್ತದೆ. ಉದಾಹರಣೆಗೆ 10,000 ರೂ. ಮಾರುಕಟ್ಟೆ ಮೌಲ್ಯದ ಒಂದು ಭದ್ರತೆ ಆಧಾರದ ಮೇಲೆ 8,000 ರೂ.ಗಳನ್ನು ಸಾಲವಾಗಿ ನೀಡಬಹುದು ಹಾಗೂ 2,000 ರೂ. ಅಂದರೆ ಶೇಕಡಾ 20 ರಷ್ಟು ಅಂಚಿನ ಅಗತ್ಯತೆಯೆಂದು ನಿರ್ಧರಿಸಬಹುದು. ಭದ್ರತೆಗಳ ಮಾರುಕಟ್ಟೆಯ ಮೌಲ್ಯ ಮತ್ತು ಅಂತಹ ಭದ್ರತೆಯ ಆಧಾರದ ಮೇಲೆ ನೀಡಲಾದ ಸಾಲದ ಮೊತ್ತ ಇವುಗಳ ನಡುವಿನ ವ್ಯತ್ಯಾಸವನ್ನು ಅಂಚಿನ ಅಗತ್ಯತೆ(margin requirement) ಎನ್ನುವರು. ಕೇಂದ್ರ ಬ್ಯಾಂಕ್ ಸಾಲದ ಪ್ರಮಾಣವನ್ನು ನಿಯಂತ್ರಿಸುವ ಸಲುವಾಗಿ ಅಂಚಿನ ಅಗತ್ಯತೆ(margin requirement)ಯನ್ನು ಕಾಲಕಾಲಕ್ಕೆ ಬದಲಾಯಿಸುತ್ತದೆ. ಸಾಲದ ಪ್ರಮಾಣವನ್ನು ನಿಯಂತ್ರಿಸುವ ಸಲುವಾಗಿ ಕೇಂದ್ರ ಬ್ಯಾಂಕ್ ಅಂಚಿನ ಅಗತ್ಯತೆಯನ್ನು ಹೆಚ್ಚಿಸಬಹುದು ಹಾಗೂ ಸಾಲ ವಿಸ್ತರಣೆಗಾಗಿ ಅಂಚಿನ ಅಗತ್ಯತೆಯನ್ನು ಕಡಿಮೆ ಮಾಡಬಹುದಾಗಿದೆ.

2) **ಅನುಭೋಗಿ ಸಾಲದ ನಿಯಂತ್ರಣ** (Regulation of consumer credit): ಅನುಭೋಗಿಗಳಿಗೆ ಕೆಲವು ಬೆಲೆಬಾಳುವ ವಸ್ತುಗಳಾದ ಕಾರು, ಟಿವಿ, ವಾಶಿಂಗ್ ಮಶೀನ್, ಪೀಠೋಪಕರಣ ಮುಂತಾದವುಗಳನ್ನು ಖರೀದಿಸಲು ನೀಡಲಾಗುವ ಸಾಲಗಳನ್ನು ಅನುಭೋಗಿ ಸಾಲಗಳು ಎನ್ನುವರು. ಬಾಳಿಕೆ ಬರುವ(durable) ವಸ್ತುಗಳನ್ನು ಕೊಂಡುಕೊಳ್ಳಲು ಪಡೆಯಲಾಗುವ ಸಾಲಗಳ ವಿಧಿ ನಿಯಮಗಳನ್ನು ನಿಯಂತ್ರಿಸಲು ಈ ವಿಧಾನವನ್ನು ಬಳಸಲಾಗುತ್ತದೆ. ಇಂತಹ ವಸ್ತುಗಳ ಅತಿಯಾದ ಬೇಡಿಕೆಯು ಹಣದುಬ್ಬರದ ಕಾರಣವಾಗುತ್ತದೆ. ಈ ಸಮಸ್ಯೆಯನ್ನು ನಿವಾರಿಸಲು ಅನುಭೋಗಿ ಸಾಲವನ್ನು ನಿಯಂತ್ರಿಸಬೇಕಾಗುತ್ತದೆ. ಅನುಭೋಗಿ ಸಾಲವನ್ನು ಪ್ರತಿಬಂಧಿಸಲು ಕೇಂದ್ರ ಬ್ಯಾಂಕ್ ಅಂಚಿನ ಅಗತ್ಯತೆಯನ್ನು ಹೆಚ್ಚಿಸಬಹುದು, ಸಾಲ ಮರುಪಾವತಿ ಅವಧಿಯನ್ನು ಕಡಿಮೆ ಮಾಡಬಹುದು ಮತ್ತು ಇಂತಹ ಸಾಲಗಳಿಗೆ ಅನ್ವಯವಾಗುವ ಬಡ್ಡಿ ದರಗಳನ್ನು ಹೆಚ್ಚಿಸಬಹುದು.

**3) ನಿರ್ದೇಶನಗಳ ಮೂಲಕ ನಿಯಂತ್ರಣ** (Control through directives): ಕೇಂದ್ರ ಬ್ಯಾಂಕ್, ಸಾಲಗಳು ಅಪೇಕ್ಷಿತ ದಿಶೆಯಲ್ಲಿ ಹರಿಯುವಂತೆ ಮಾಡಲು, ವಾಣಿಜ್ಯ ಬ್ಯಾಂಕುಗಳಿಗೆ ಲಿಖಿತ ಅಥವಾ ಮೌಖಿಕ ನಿರ್ದೇಶನಗಳನ್ನು ನೀಡಬಹುದು. ವಾಣಿಜ್ಯ ಬ್ಯಾಂಕುಗಳು ಸಾಲ ನೀಡಿಕೆಯಲ್ಲಿ ಮೃದು ಅಥವಾ ಕಠಿಣ ನಿಯಮ ಧೋರಣೆ ಅನುಸರಿಸಲು ರಿಜರ್ವ್ ಬ್ಯಾಂಕ್ ಸೂಚಿಸಬಹುದಾಗಿದೆ.

**4) ಸಾಲ ಪಡಿತರ** (Credit rationing): ವಾಣಿಜ್ಯ ಬ್ಯಾಂಕುಗಳು ನಿರ್ದಿಷ್ಟ ಮೊತ್ತದವರೆಗೆ ಮಾತ್ರ ಸಾಲ ನೀಡಬಹುದೆಂದು ರಿಜರ್ವ್ ಬ್ಯಾಂಕ್ ನಿರ್ದೇಶನ ಅಥವಾ ಸೂಚನೆ ನೀಡಬಹುದು. ಇಂತಹ ಸಂದರ್ಭಗಳಲ್ಲಿ ಜನರಿಗೆ ಸಾಲ ನೀಡುವಿಕೆಯಲ್ಲಿ ಬ್ಯಾಂಕುಗಳು ಕಠಿಣ ನಿಲುವು ತಳೆಯಬಹುದಾಗಿದೆ. ಅವು ಕೆಲವು ಕ್ಷೇತ್ರಗಳಿಗೆ ಮಾತ್ರ ಸಾಲವನ್ನು ಪೂರೈಸಬಹುದು. ಇದರ ಅರ್ಥ ಪ್ರತಿಯೊಂದು ವಾಣಿಜ್ಯ ಬ್ಯಾಂಕ್ ನೀಡುವ ಸಾಲಗಳು ಹಾಗೂ ಮುಂಗಡಗಳ ಗರಿಷ್ಠ ಮಿತಿಯನ್ನು ರಿಜರ್ವ್ ಬ್ಯಾಂಕ್ ನಿರ್ಧರಿಸುತ್ತದೆ.

**5) ನೇರ ಕ್ರಮ** (Direct action): ಇದು ವಾಣಿಜ್ಯ ಬ್ಯಾಂಕುಗಳ ವಿರುದ್ಧ ಕೇಂದ್ರ ಬ್ಯಾಂಕ್ ಒತ್ತಾಯ ಪೂರ್ವಕವಾಗಿ ಕೈಗೊಳ್ಳುವ ಕ್ರಮವಾಗಿದೆ. ಕೇಂದ್ರ ಬ್ಯಾಂಕ್ ವಾಣಿಜ್ಯ ಬ್ಯಾಂಕುಗಳ ಭದ್ರತೆಗಳನ್ನು ಮರುವಟಾಯಿಸುವುದನ್ನು ಅಥವಾ ಮುಂಗಡಗಳನ್ನು ನೀಡುವುದನ್ನು ತಿರಸ್ಕರಿಸಬಹುದು. ಅದರಂತೆ ನಿಗದಿತ ಮಿತಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಪಡೆದ ಸಾಲಕ್ಕೆ ದಂಡ ರೂಪದ ಬಡ್ಡಿ ವಿಧಿಸಬಹುದು.

**6) ನೈತಿಕ ಒತ್ತಡ** (Moral suasion): ಸಾಲ ನಿಯಂತ್ರಣದ ಈ ವಿಧಾನವು ವಾಣಿಜ್ಯ ಬ್ಯಾಂಕುಗಳು ಸಾಲ ನೀತಿಯನ್ನು ಜಾರಿಗೊಳಿಸಲು ಸಹಕರಿಸುವಂತೆ, ಸಲಹೆ ಹಾಗೂ ಕೋರಿಕೆ ಮಾಡುವ ತಂತ್ರಗಳನ್ನು ಒಳಗೊಂಡಿದೆ. ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗದ ಹಣದುಬ್ಬರವನ್ನು ಹೆಚ್ಚಿಸುವ ಅನುತ್ಪಾದಕ ಉದ್ದೇಶಗಳಿಗೆ ವಾಣಿಜ್ಯ ಬ್ಯಾಂಕುಗಳು ಸಾಲ ನೀಡದಂತೆ ಕೇಂದ್ರ ಬ್ಯಾಂಕ್ ಮನ ಒಲಿಸಬಹುದಾಗಿದೆ.

**7) ಪ್ರಚಾರ** (Publicity): ಹಣದ ಮಾರುಕಟ್ಟೆ ಪ್ರವೃತ್ತಿಯ(money market) ಬಗ್ಗೆ ನಿಯಮಿತ ಪ್ರಚಾರ ಕೈಗೊಂಡು ಸಾಲ ನಿಯಂತ್ರಣ ಕುರಿತು ವಾಣಿಜ್ಯ ಬ್ಯಾಂಕುಗಳಿಗೆ ಪೂರ್ಣ ಮಾಹಿತಿಹೊಂದುವಂತೆ ಮಾಡುತ್ತದೆ. ಸಾಲ ಹಾಗೂ ವ್ಯಾಪಾರ ಸ್ಥಿತಿಗಳಿಗೆ ಸಂಬಂಧಿಸಿದ ಮಾಸಿಕ ಪ್ರಕಟಣೆಗಳು ಮತ್ತು ಬ್ಯಾಂಕಿಂಗ್ ವಲಯ ಹಾಗೂ ವ್ಯಾಪಾರ–ವ್ಯವಹಾರಗಳ ಕುರಿತಾದ ವಾರ್ಷಿಕ ವರದಿಯನ್ನು ಇದು ಒಳಗೊಂಡಿದೆ.

ಭಾರತದಲ್ಲಿ ರಿಜರ್ವ್ ಬ್ಯಾಂಕ್ ಹಣಕಾಸು ವ್ಯವಸ್ಥೆಯ ನಿಯಂತ್ರಣದ ಕಾರ್ಯ ನಿರ್ವಹಿಸುವ ಮೂಲಕ ಹಣದ ಪೂರೈಕೆಯನ್ನು ನಿಯಂತ್ರಿಸುತ್ತದೆ. ವಾಣಿಜ್ಯ ಬ್ಯಾಂಕುಗಳ ಹಾಗೂ ರಿಜರ್ವ್ ಬ್ಯಾಂಕಿನ ಹಲವಾರು ಚಟುವಟಿಕೆಗಳು ಆರ್ಥಿಕ ವ್ಯವಸ್ಥೆಯಲ್ಲಿಯ ಹಣದ ಪೂರೈಕೆಯಲ್ಲಿನ ಬದಲಾವಣೆಗಳಿಗೆ ಕಾರಣವಾಗುತ್ತದೆ. ಬ್ಯಾಂಕ್ ದರ ಹಾಗೂ ಮೀಸಲು ಹಣದ ಅನುಪಾತಗಳ ಆಧಾರದ ಮೇಲೆ ರಿಜರ್ವ್ ಬ್ಯಾಂಕ್ ಹಣದ ಪೂರೈಕೆಯನ್ನು ನಿಯಂತ್ರಿಸುತ್ತದೆ. ರಿಜರ್ವ ಬ್ಯಾಂಕ್ ಅಧಿಕ ಶಕ್ತಿಯ ಹಣದ ಸಂಗ್ರಹ ನಿಯಂತ್ರಣ, ಬ್ಯಾಂಕ್ ದರ ಮತ್ತು ವಾಣಿಜ್ಯ ಬ್ಯಾಂಕುಗಳ ಮೀಸಲು ಅಗತ್ಯತೆಗಳನ್ನು ನಿಯಂತ್ರಿಸುವುದರ ಮೂಲಕ ಹಣದ ಪೂರೈಕೆಯನ್ನು ನಿರ್ವಹಿಸುತ್ತದೆ. ಇದು ಬಾಹ್ಯ ತಲ್ಲಣಗಳಿಂದ ಅಂದರೆ ವಿದೇಶಿ ವಿನಿಮಯ ಒಳಹರಿವಿನಿಂದ ಹಣದ ಮಾರುಕಟ್ಟೆಯಲ್ಲಿ ಹಣದ ಪೂರೈಕೆಯನ್ನು ಸ್ಥಿರವಾಗಿಡಲು ಮಧ್ಯಸ್ಥಿಕೆಯನ್ನು ಸಹ ವಹಿಸುತ್ತದೆ.

### ಚಟುವಟಿಕೆ

1. ಒಂದು ವಾಣಿಜ್ಯ ಬ್ಯಾಂಕಿಗೆ ಭೇಟಿ ನೀಡಿ ಮತ್ತು ಅದರ ಚಟುವಟಿಕೆಗಳ ಬಗ್ಗೆ ಒಂದು ವರದಿಯನ್ನು ಬರೆಯಿರಿ.

## ಅಭ್ಯಾಸ

**I. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಸಾಟಿ ವಿನಿಮಯ ಪದ್ಧತಿ ಎಂದರೇನು?
2. ಹಣ ಎಂದರೇನು?
3. ವಾಕರ್‌ರವರ ಪ್ರಕಾರ ಹಣವನ್ನು ವ್ಯಾಖ್ಯಾನಿಸಿ.
4. ಹಣದ ಎರಡು ಪ್ರಾಥಮಿಕ ಕಾರ್ಯಗಳನ್ನು ತಿಳಿಸಿ.
5. ಅಧಿಕ ಶಕ್ತಿಯ(High Powered) ಹಣ ಎಂದರೇನು?
6. ಹಣದ ಬೇಡಿಕೆ ಎಂದರೇನು?
7. ಹಣದ ಪೂರೈಕೆಯ ಅರ್ಥ ಕೊಡಿ.
8. ATMನ್ನು ವಿಸ್ತರಿಸಿ.
9. ಸಂಕುಚಿತ ಹಣ ಎಂದರೇನು?
10. ವಿಶಾಲ ಹಣ ಎಂದರೇನು?
11. ಪ್ರಾಥಮಿಕ ಠೇವಣಿ ಎಂದರೇನು?
12. ಬ್ಯಾಂಕು ದರ ಎಂದರೇನು?
13. ಮೀರೆಳೆತ (overdraft) ಎಂದರೇನು?
14. ನಗದು ಮೀಸಲು ಅನುಪಾತ ಎಂದರೇನು?
15. ಶಾಸನಬದ್ಧ ದ್ರವ್ಯಾನುಪಾತ ಎಂದರೇನು?

**II. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಸಾಟಿ ಪದ್ಧತಿಯ ಯಾವುದಾದರೂ ನಾಲ್ಕು ತೊಂದರೆಗಳನ್ನು ಹೆಸರಿಸಿ.
2. ಸಂಕುಚಿತ ಹಣ ಮತ್ತು ವಿಶಾಲ ಹಣದ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.
3. ಪ್ರಾಥಮಿಕ ಠೇವಣಿ ಮತ್ತು ಮಾಧ್ಯಮಿಕ ಠೇವಣಿ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.
4. ಜೆ.ಎಂ. ಕೇನ್ಸ್‌ರವರ ಪ್ರಕಾರ ಹಣದ ಬೇಡಿಕೆಯ ಉದ್ದೇಶಗಳನ್ನು ತಿಳಿಸಿ.
5. ಠೇವಣಿಯ ವಿಧಗಳಾವುವು?
6. ಹಣಕಾಸು ನೀತಿಯ ನಾಲ್ಕು ಉದ್ದೇಶಗಳನ್ನು ನೀಡಿ.
7. ಮುಕ್ತ ಮಾರುಕಟ್ಟೆ ಕಾರ್ಯಾಚರಣೆಯನ್ನು ಏನೆಂದು ಅರ್ಥೈಸುವಿರಿ?

III. **ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಹದಿನೈದು ವಾಕ್ಯಗಳಲ್ಲಿ ಉತ್ತರಿಸಿ.**

1. ಹಣದ ಪ್ರಾಥಮಿಕ ಕಾರ್ಯಗಳನ್ನು ವಿವರಿಸಿ.
2. ಹಣದ ಪೂರೈಕೆಯ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.
3. RBI ನ ಹಣಕಾಸು ನೀತಿಯ ಪರಿಮಾಣಾತ್ಮಕ ವಿಧಾನಗಳನ್ನು ವಿವರಿಸಿ.
4. RBI ನ ಹಣಕಾಸು ನೀತಿಯ ಗುಣಾತ್ಮಕ ಅಥವಾ ಆಯ್ಕೆ ವಿಧಾನಗಳನ್ನು ವಿವರಿಸಿ.
5. ಹಣಕಾಸು ನೀತಿಯ ಉದ್ದೇಶಗಳನ್ನು ವಿವರಿಸಿ.
6. ವಾಣಿಜ್ಯ ಬ್ಯಾಂಕುಗಳ ಪ್ರಾಥಮಿಕ ಕಾರ್ಯಗಳನ್ನು ವಿವರಿಸಿ.

IV. **ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ನಲವತ್ತು ವಾಕ್ಯಗಳಲ್ಲಿ ಉತ್ತರಿಸಿ.**

1. ಹಣದ ಕಾರ್ಯಗಳನ್ನು ವಿವರಿಸಿ.
2. ಹಣದ ಬೇಡಿಕೆಯ ಮೂರು ಉದ್ದೇಶಗಳನ್ನು ವಿವರಿಸಿ.
3. ವಾಣಿಜ್ಯ ಬ್ಯಾಂಕುಗಳ ಕಾರ್ಯಗಳನ್ನು ಕುರಿತು ಬರೆಯಿರಿ.
4. ಭಾರತೀಯ ರಿಜರ್ವ್ ಬ್ಯಾಂಕಿನ ಕಾರ್ಯಗಳನ್ನು ವಿವರಿಸಿ.
5. ಭಾರತೀಯ ರಿಜರ್ವ್ ಬ್ಯಾಂಕಿನ ಹಣಕಾಸು ನೀತಿಯ ಸಾಧನಗಳನ್ನು ವಿವರಿಸಿ.

* * *

# ಅಧ್ಯಾಯ – 10

# ಅನುಭೋಗ ಮತ್ತು ಹೂಡಿಕೆ ಬಿಂಬಕ

## (CONSUMPTION AND INVESTMENT FUNCTION)

ಹೂಡಿಕೆ ಎಂದರೆ ಪೇಪರ್ ಸೆಕ್ಯೂರಿಟಿಗಳು, ಬಾಂಡುಗಳು, ಡಿಬೆಂಚರುಗಳು ಮತ್ತು ಶೇರುಗಳನ್ನು ಕೊಂಡುಕೊಳ್ಳುವುದು ಎಂದು ಅರ್ಥವಲ್ಲ, ಆದರೆ ಹೊಸ ಕಾರ್ಖಾನೆ, ಯಂತ್ರಗಳು ಇತ್ಯಾದಿಗಳನ್ನು ಕೊಂಡುಕೊಳ್ಳುವುದು ಎಂದು ಅರ್ಥ.

**– ಸ್ಟೊನಿಯರ್ ಮತ್ತು ಹೇಗ್.**

## 10.1 ಪೀಠಿಕೆ (INTRODUCTION)

ಹಿಂದಿನ ಅಧ್ಯಾಯದಲ್ಲಿ ನಾವು ಹಣ ಮತ್ತು ಬ್ಯಾಂಕಿಂಗ್ ವಿಷಯಗಳಿಗೆ ಸಂಬಂಧಪಟ್ಟ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಂಡಿದ್ದೇವೆ. ಅನುಭೋಗಕ್ಕಾಗಿ ಸರಕುಗಳನ್ನು ಮತ್ತು ಸೇವೆಗಳನ್ನು ಕೊಂಡುಕೊಳ್ಳಲು ಹಣವನ್ನು ವಿನಿಮಯ ಮಾಧ್ಯಮವಾಗಿ ಬಳಸಲಾಗುವುದು. ರಾಷ್ಟ್ರೀಯ ಆದಾಯ ಲೆಕ್ಕಾಚಾರದ ಅಧ್ಯಾಯದಲ್ಲಿ, ನಾವು ಅನುಭೋಗ, ಹೂಡಿಕೆ ಮತ್ತು ಉತ್ಪನ್ನ ಶಬ್ದಗಳನ್ನು ತಿಳಿದುಕೊಂಡಿದ್ದೇವೆ. ಅನುಭೋಗ ಎಂದರೇನು? ಅನುಭೋಗ ಬಿಂಬಕವನ್ನು ಪ್ರಭಾವಿಸುವ ಅಂಶಗಳು ಯಾವುವು? ಹೂಡಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು ಯಾವುವು? ಅನುಭೋಗ ಬಿಂಬಕ ಮತ್ತು ಹೂಡಿಕೆ ಬಿಂಬಕ ಯಾವ ರೀತಿಯಲ್ಲಿ ಆರ್ಥಿಕತೆಯ ಮೇಲೆ ಪ್ರಭಾವ ಬೀರುತ್ತವೆ? ಈ ಅಧ್ಯಾಯದಲ್ಲಿ ಅನುಭೋಗ ಮತ್ತು ಹೂಡಿಕೆ ಬಿಂಬಕಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ನಾವು ತಿಳಿದುಕೊಳ್ಳಲಿದ್ದೇವೆ.

## 10.2 ಅನುಭೋಗ, ಆದಾಯ, ಉಳಿತಾಯ ಮತ್ತು ಹೂಡಿಕೆ ಪರಿಕಲ್ಪನೆಗಳು (CONCEPT OF CONSUMPTION, INCOME, SAVING AND INVESTMENT)

ಈ ಭಾಗದಲ್ಲಿ ಅನುಭೋಗ ಬಿಂಬಕ ಮತ್ತು ಹೂಡಿಕೆ ಬಿಂಬಕಕ್ಕೆ ಸಂಬಂಧಪಟ್ಟ ಕೆಲವು ಮೂಲ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳೋಣ. ಇಲ್ಲಿ ಪರಿಕಲ್ಪನೆಗಳು ಸಮಗ್ರ ವಿಧಾನದಲ್ಲಿ ಚರ್ಚಿಸಲ್ಪಡುತ್ತವೆ. ಉದಾ: ನಾವು ಆದಾಯವನ್ನು ಚರ್ಚಿಸುವಾಗ ಅದು ಸಮಗ್ರ ಆದಾಯಕ್ಕೆ ಸಂಬಂಧಿಸಿದೆ.

**ಅನುಭೋಗ** (Consumption) : ಒಟ್ಟು ಉತ್ಪಾದನಾ ಪ್ರಮಾಣವು (ರಾಷ್ಟ್ರೀಯ ಆದಾಯ) ಗ್ರಾಹಕ ಸರಕುಗಳು ಮತ್ತು ಉತ್ಪಾದಕ ಸರಕುಗಳನ್ನು ಒಳಗೊಂಡಿರುತ್ತದೆ. ಇನ್ನೊಂದೆಡೆಯಲ್ಲಿ, ಒಂದು ಕಾಲಾವಧಿಯಲ್ಲಿ ಗ್ರಾಹಕರು ಕೊಂಡು ಬಳಸಿದ ಸರಕುಗಳ ಒಟ್ಟು ಪ್ರಮಾಣವನ್ನು ಅನುಭೋಗ ಪ್ರತಿನಿಧಿಸುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅನುಭೋಗ ಎಂದರೆ ಒಂದು ನಿರ್ದಿಷ್ಟ ಆದಾಯ ಮಟ್ಟದಲ್ಲಿ ಅನುಭೋಗಕ್ಕಾಗಿ ಮಾಡಿದ ಖರ್ಚು ಎಂದರ್ಥ. ಆದಾಯ ಮತ್ತು ಅನುಭೋಗ ಸಿದ್ಧಾಂತದಲ್ಲಿ ಅನುಭೋಗ ಪರಿಕಲ್ಪನೆಯು ಪ್ರಾಮುಖ್ಯತೆ ಪಡೆದಿದೆ.



**ಮಿಲ್ಟನ್ ಫ್ರೀಡ್‌ಮನ್**ರವರು 1912ರಲ್ಲಿ ಜನಿಸಿದ್ದು, ಇಪ್ಪತ್ತನೇ ಶತಮಾನದ ಮುಕ್ತ ಮಾರುಕಟ್ಟೆಯ ಪ್ರಮುಖ ಪ್ರತಿಪಾದಕರಾಗಿದ್ದರು. ಇವರು 1933ರಲ್ಲಿ ಚಿಕಾಗೋ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿಯನ್ನು ಪಡೆದರು. 1946ರಲ್ಲಿ ಕೊಲಂಬಿಯಾ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದರು. ಇವರು ಅನುಭೋಗ ವಿಶ್ಲೇಷಣೆಯಲ್ಲಿನ ಸಾಧನೆ, ಹಣಕಾಸಿನ ಇತಿಹಾಸ ಮತ್ತು ಸಿದ್ಧಾಂತ ಹಾಗೂ ಇವರ ಸ್ಥಿರತೆ ನೀತಿಯ ಸಂಕೀರ್ಣತೆಯ ಬಗೆಗಿನ ದೃಷ್ಟಾಂತಕ್ಕೆ 1976ರಲ್ಲಿ ನೋಬೆಲ್ ಪಾರಿತೋಷಕವನ್ನು ನೀಡಲಾಯಿತು.

ಉದ್ಯೋಗ ಮಟ್ಟವು ಅನುಭೋಗ ಮತ್ತು ಹೂಡಿಕೆಯ ಜಂಟಿ ಪ್ರಭಾವವನ್ನು ಅವಲಂಬಿಸಿದೆ. ಅನುಭೋಗವು ಆದಾಯವನ್ನೇ ಅವಲಂಬಿಸಿದೆ. ಇದನ್ನು ಸಾಂಕೇತಿಕವಾಗಿ ಈ ಕೆಳಕಂಡಂತೆ ವ್ಯಕ್ತಪಡಿಸಬಹುದು.

$$C = f(Y)$$

ಇದರಲ್ಲಿ C ಎಂದರೆ ಅನುಭೋಗ, f ಎಂದರೆ ಬಿಂಬಕ ಸಂಬಂಧ ಮತ್ತು Y ಎಂದರೆ ಆದಾಯ. ಇದು ಅನುಭೋಗದ ಮೇಲೆ ಇತರ ಎಲ್ಲಾ ಅಂಶಗಳ ಪ್ರಭಾವ ಸ್ಥಿರವಾಗಿರುತ್ತದೆ ಎಂಬ ಊಹೆಯನ್ನು ಅವಲಂಬಿಸಿದೆ. ಇಲ್ಲಿ ಆದಾಯವು(Y) ಸ್ವತಂತ್ರ ಚಲಕವಾಗಿದೆ ಮತ್ತು ಅನುಭೋಗವು (C) ಅವಲಂಬಿತ ಚಲಕವಾಗಿದೆ.

**ಆದಾಯ** (Income) : ಆದಾಯವು ನಾಲ್ಕು ಉತ್ಪಾದನಾಂಗಗಳಿಗೆ ಗೇಣಿ, ಕೂಲಿ, ಬಡ್ಡಿ ಮತ್ತು ಲಾಭಗಳ ರೂಪದಲ್ಲಿ ಪಡೆಯುವ ಒಟ್ಟು ಹಣದ ಸಂಭಾವನೆಯಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಆದಾಯ ಎಂದರೆ ಉತ್ಪಾದಕರು ಉತ್ಪಾದಿಸಲ್ಪಟ್ಟ ಸರಕುಗಳು ಮತ್ತು ಸೇವೆಗಳನ್ನು ಮಾರಾಟ ಮಾಡಿದ ನಂತರ ಸ್ವೀಕರಿಸಿದ ಒಟ್ಟು ವರಮಾನವಾಗಿದೆ. ಆದಾಯವನ್ನು ಗ್ರಾಹಕ ಸರಕುಗಳು ಮತ್ತು ಹೂಡಿಕೆ ಸರಕುಗಳ ಮೇಲೆ ವ್ಯಯಿಸಲಾಗುತ್ತದೆ. ಇದನ್ನು ಈ ಕೆಳಕಂಡಂತೆ ಹೇಳಬಹುದು.

$$Y = C + I$$

ಇದರಲ್ಲಿ Y ಎಂದರೆ ಆದಾಯ, C ಎಂದರೆ ಅನುಭೋಗ ವೆಚ್ಚ ಮತ್ತು I ಎಂದರೆ ಹೂಡಿಕೆ ವೆಚ್ಚ.

ಇದು ಉತ್ಪಾದನೆ ಮತ್ತು ಪೂರೈಕೆ ಕಡೆಯ ಆದಾಯವಾಗಿದೆ.

**ಉಳಿತಾಯ** (Saving): ಉಳಿತಾಯವು ಅನುಭೋಗಕ್ಕಾಗಿ ವ್ಯಯ ಮಾಡದೆ ಇರುವ ಆದಾಯದ ಭಾಗವಾಗಿದೆ. ಇದು ವೆಚ್ಚಕ್ಕಿಂತ (ಅನುಭೋಗ) ಮಿಗಿಲಾದ ಆದಾಯವಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಅನುಭೋಗದ ಮೇಲೆ ವೆಚ್ಚ ಮಾಡದಿರುವ ಆದಾಯವನ್ನು ಉಳಿತಾಯ ಎನ್ನಬಹುದು. ಉಳಿತಾಯವು ಬೇಡಿಕೆ ಕಡೆಯ ಆದಾಯವಾಗಿದೆ. ಇಡೀ ರಾಷ್ಟ್ರವು ತನ್ನ ಆದಾಯವನ್ನು ಅನುಭೋಗದ ಮೇಲೆ ಖರ್ಚು ಮಾಡುತ್ತದೆ ಮತ್ತು ಮಿಕ್ಕಿದ ಹಣವು ಉಳಿತಾಯ ವಾಗುತ್ತದೆ. ಆದುದರಿಂದ,

$$Y = C + S$$

ಅಥವಾ

$$S = Y - C$$

ಇದರಲ್ಲಿ Y ಎಂದರೆ ಆದಾಯ, C ಎಂದರೆ ಅನುಭೋಗ ಮತ್ತು S ಎಂದರೆ ಉಳಿತಾಯ.

**ಹೂಡಿಕೆ** (Investment): ಕೇನ್ಸ್‌ರವರ ಪ್ರಕಾರ ಹೂಡಿಕೆಯು ಯಾವಾಗಲೂ ಹೊಸ ಆದಾಯ ಮತ್ತು ಉದ್ಯೋಗವನ್ನು ಸೃಷ್ಟಿಸಬೇಕು. ಸಾಮಾನ್ಯವಾಗಿ ಹೂಡಿಕೆ ಎಂದರೆ ಶೇರು, ಡಿಬೆಂಚರು ಇತ್ಯಾದಿಗಳನ್ನು ಕೊಂಡುಕೊಳ್ಳುವುದು ಎಂದರ್ಥ. ಆದರೆ ಕೇನ್ಸ್‌ರವರ ಪ್ರಕಾರ ಹೂಡಿಕೆ ಎಂದರೆ ರಾಷ್ಟ್ರದ ಬಂಡವಾಳ ಸರಕುಗಳ ಭೌತಿಕ ಸಂಗ್ರಹಣೆಗೆ ಆಗುವ ಸೇರ್ಪಡೆ. ಉದಾಹರಣೆಗೆ, ನೂತನ ಕಾರ್ಖಾನೆಯ ಕಟ್ಟಡಗಳು, ಯಂತ್ರ, ಸಾಧನ ಸಲಕರಣೆಗಳು ಇತ್ಯಾದಿ. ಹೂಡಿಕೆಯು ಸಿದ್ಧಸರಕುಗಳ ಸಂಗ್ರಹಣೆ, ಉತ್ಪಾದನಾ ಹಂತದಲ್ಲಿರುವ ಸರಕುಗಳು, ಸ್ಥಿರ ಬಂಡವಾಳ ಸರಕುಗಳು ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಹಾಗಾಗಿ, ಆದಾಯ(Y)ವು ವೆಚ್ಚಕ್ಕೆ (E) ಸಮನಾಗಿರುತ್ತದೆ. ಅಂದರೆ $Y = E$. ಆದುದರಿಂದ, ಒಟ್ಟು ಆದಾಯವು ಅನುಭೋಗಿ ಸರಕುಗಳು(C) ಮತ್ತು ಹೂಡಿಕೆ ಸರಕುಗಳ(I) ಮೇಲೆ ಮಾಡಿದ ವೆಚ್ಚವನ್ನು ಒಳಗೊಂಡಿರುತ್ತದೆ.

ಸಾಂಕೇತಿಕವಾಗಿ $Y = C + I$

ಆದುದರಿಂದ $I = Y - C$

ಸಾಮಾನ್ಯವಾಗಿ ಹೂಡಿಕೆಯು ಬಂಡವಾಳದ ಸೀಮಾಂತ ದಕ್ಷತೆ ಮತ್ತು ಬಡ್ಡಿಯ ದರದಿಂದ ಪ್ರಭಾವಿತವಾಗಿದೆ. ಅದು ಅನುಭೋಗವನ್ನೂ ಸಹ ಅವಲಂಬಿಸಿದೆ.

**ಉಳಿತಾಯ ಮತ್ತು ಹೂಡಿಕೆಯ ನಡುವಿನ ಸಮಾನತೆ** (Equality between Saving and Investment): ಸಂಪ್ರದಾಯ ಅರ್ಥಶಾಸ್ತ್ರಜ್ಞರ ಪ್ರಕಾರ, ಪೂರ್ಣ ಉದ್ಯೋಗ ಆರ್ಥಿಕತೆಯಲ್ಲಿ ಉಳಿತಾಯ ಮತ್ತು ಹೂಡಿಕೆಗಳು ಯಾವಾಗಲೂ ಸಮಾನವಾಗಿರುತ್ತವೆ. ಅವರ ಅಭಿಪ್ರಾಯದಂತೆ, ಉಳಿತಾಯ ಮತ್ತು ಹೂಡಿಕೆಗಳು ಬಡ್ಡಿ ದರವನ್ನು ಅವಲಂಬಿಸಿವೆ.

ಸಾಂಕೇತಿಕವಾಗಿ $S = f(r)$ ಮತ್ತು $I = f(r)$.

ಇಲ್ಲಿ r ಎಂದರೆ ಬಡ್ಡಿ ದರ.

ಆದುದರಿಂದ $S = I$

ಬಡ್ಡಿ ದರವು ಉಳಿತಾಯ ಮತ್ತು ಹೂಡಿಕೆ ನಡುವೆ ಸಮಾನತೆಯನ್ನು ತರುತ್ತದೆ. ಉಳಿತಾಯವು ಹೂಡಿಕೆಗಿಂತ ಕಡಿಮೆ ಇದ್ದಾಗ, ಬಡ್ಡಿದರದ ಹೆಚ್ಚಳವು ಉಳಿತಾಯವನ್ನು ಹೆಚ್ಚಿಸುತ್ತದೆ ಮತ್ತು ಹೂಡಿಕೆಯನ್ನು ಕಡಿಮೆ ಮಾಡುತ್ತದೆ. ಅಂತಿಮವಾಗಿ ಎರಡೂ ಸಮಾನವಾಗುತ್ತವೆ. ಇನ್ನೊಂದೆಡೆಯಲ್ಲಿ, ಉಳಿತಾಯವು ಹೂಡಿಕೆಗಿಂತ ಅಧಿಕವಾಗಿದ್ದಾಗ ಬಡ್ಡಿದರ ಇಳಿಕೆಯಾಗಿ ಹೂಡಿಕೆಯನ್ನು ಹೆಚ್ಚಿಸುತ್ತದೆ ಮತ್ತು ಉಳಿತಾಯವನ್ನು ಕಡಿಮೆ ಮಾಡುತ್ತದೆ. ಕೊನೆಗೆ ಎರಡೂ ಸಮಾನವಾಗುತ್ತವೆ.

ಆದರೆ ಸಂಪ್ರದಾಯ ಅರ್ಥಶಾಸ್ತ್ರಜ್ಞರ ಈ ಉಳಿತಾಯ–ಹೂಡಿಕೆ ಸಮಾನತೆಯ ಅಭಿಪ್ರಾಯವನ್ನು ಕೇನ್ಸ್ ಒಪ್ಪುವುದಿಲ್ಲ. ಅವರು ಉಳಿತಾಯ–ಹೂಡಿಕೆ ಸಮಾನತೆಯ ಬಗ್ಗೆ ಎರಡು ಅಭಿಪ್ರಾಯಗಳನ್ನು ನೀಡುತ್ತಾರೆ. ಮೊದಲ ಅಭಿಪ್ರಾಯವು ಲೆಕ್ಕಚಾರದ ಅಥವಾ ವ್ಯಾಖ್ಯಾನದ ಸಮಾನತೆ. ಇದನ್ನು ರಾಷ್ಟ್ರೀಯ ಆದಾಯದ ಲೆಕ್ಕಚಾರದಲ್ಲಿ ಬಳಸಲಾಗುತ್ತದೆ. ಈ ಅಭಿಪ್ರಾಯದಂತೆ ಉಳಿತಾಯ ಮತ್ತು ಹೂಡಿಕೆಯು ಎಲ್ಲಾ ಕಾಲದಲ್ಲೂ ಮತ್ತು ಎಲ್ಲಾ ಹಂತದ ಆದಾಯದಲ್ಲೂ ಸಮಾನವಾಗಿರುತ್ತವೆ. ಕೇನ್ಸ್‌ರವರು ಅನುಭೋಗವನ್ನು ಮೀರಿದ ಆದಾಯವೇ ಉಳಿತಾಯ ಎಂದು ವ್ಯಾಖ್ಯಾನಿಸಿದ್ದಾರೆ. ಅದೇ ರೀತಿಯಲ್ಲಿ ಹೂಡಿಕೆಯನ್ನು ವ್ಯಾಖ್ಯಾನಿಸಲಾಗಿದೆ. ಹಾಗಾಗಿ ಉಳಿತಾಯ ಮತ್ತು ಹೂಡಿಕೆ ಸದಾಕಾಲ ಸಮಾನವಾಗಿರುತ್ತವೆ.

ಸಾಂಕೇತಿಕವಾಗಿ, (i) $S = Y - C$

(ii) $I = Y - C$

$Y - C$ ಎರಡೂ ಸಮೀಕರಣದಲ್ಲಿ (i & ii) ಸಾಮಾನ್ಯ ಅಂಶವಾಗಿರುವುದರಿಂದ,

(iii) $S = I$

ಕೇನ್ಸ್ ಇನ್ನೊಂದು ವಿಧಾನದಲ್ಲಿ ಇವೆರಡರ ನಡುವೆ ಸಮಾನತೆಯನ್ನು ಸಾಧಿಸಿದ್ದಾರೆ. ಅವರ ಪ್ರಕಾರ, ಆದಾಯವು ಅನುಭೋಗ ಮತ್ತು ಹೂಡಿಕೆಗೆ ಸಮವಾಗಿರುತ್ತದೆ ಮತ್ತು ಉಳಿತಾಯವು ಅನುಭೋಗವನ್ನು ಮೀರಿದ ಆದಾಯವಾಗಿದೆ.

ಹಾಗಾಗಿ, $Y = C + S$

$Y = C + I$

ಆದುದರಿಂದ, $C + S = C + I$

ಹಾಗಾಗಿ, $S = I$

ಉಳಿತಾಯ ಮತ್ತು ಹೂಡಿಕೆ ಇವೆರಡೂ ಆದಾಯ ಮತ್ತು ಅನುಭೋಗದ ನಡುವಿನ ವ್ಯತ್ಯಾಸವಾಗಿದೆ. ಹಾಗಾಗಿ ಅವೆರಡೂ ಸಮವಾಗಿರುತ್ತವೆ.

ಕೇನ್ಸ್‌ರವರ ಇನ್ನೊಂದು ಅಭಿಪ್ರಾಯ ಬಿಂಬಕ ಸಮಾನತೆಗೆ ಸಂಬಂಧಿಸಿದೆ. ಇದರಂತೆ ಉಳಿತಾಯ ಮತ್ತು ಹೂಡಿಕೆ ಸಮಾನವಾಗಿರುವುದಲ್ಲದೆ, ಸ್ಥಿತಿ ಸ್ಥಾಪಕತ್ವವನ್ನು ಹೊಂದಿವೆ. ಈ ಸಮಾನತೆಯು ಆದಾಯದ ಹೊಂದಾಣಿಕೆಯಿಂದಾಗಿ ಬರುತ್ತದೆ ಮತ್ತು ಸಂಪ್ರದಾಯ ಅರ್ಥಶಾಸ್ತ್ರಜ್ಞರ ವಾದದಂತೆ ಬಡ್ಡಿದರದಿಂದಲ್ಲ. ಆದಾಯವು ಉಳಿತಾಯ ಮತ್ತು ಹೂಡಿಕೆಯೊಂದಿಗೆ ಸಂಬಂಧ ಹೊಂದಿದೆ. ಉಳಿತಾಯವು ಹೂಡಿಕೆಯನ್ನು ಮೀರಿದರೆ, ಆದಾಯವು ಇಳಿಕೆಯಾಗುತ್ತದೆ ಮತ್ತು ಹೂಡಿಕೆಯು ಉಳಿತಾಯವನ್ನು ಮೀರಿದರೆ ಆದಾಯವು ಏರಿಕೆಯಾಗುತ್ತದೆ. ಅದಾಯ, ಉಳಿತಾಯ ಮತ್ತು ಹೂಡಿಕೆಯಲ್ಲಿ ಆಗುವ ಬದಲಾವಣೆಯ ಪ್ರಕ್ರಿಯೆಯು ಉಳಿತಾಯ ಮತ್ತು ಹೂಡಿಕೆಯ ನಡುವೆ ಸಮಾನತೆ ಮತ್ತು ಅವೆರಡೂ ಸ್ಥಿತಿಸ್ಥಾಪಕತ್ವ ತಲುಪುವವರೆಗೆ ಮುಂದುವರಿಯುತ್ತದೆ.

## 10.3 ಕೇನ್ಸ್‌ರವರ ಅನುಭೋಗ ಬಿಂಬಕ (KEYNES' CONSUMPTION FUNCTION)

ಅನುಭೋಗ ಬಿಂಬಕವು ಕೇನ್ಸರವರ ಸಾಮಾನ್ಯ ಸಿದ್ಧಾಂತದ ಒಂದು ಪ್ರಮುಖ ಪರಿಕಲ್ಪನೆ. ಇದನ್ನು ಅನುಭೋಗ ಪ್ರವೃತ್ತಿ ಎಂದೂ ಕರೆಯುತ್ತಾರೆ. ಅನುಭೋಗ ಬಿಂಬಕವು ಆದಾಯ ಮತ್ತು ಅನುಭೋಗದ ನಡುವಿನ ಸಂಬಂಧವನ್ನು ತೋರಿಸುತ್ತದೆ. ಈ ಸಂಬಂಧವನ್ನು ಸಾಂಕೇತಿಕವಾಗಿ ಈ ಕೆಳಗಿನಂತೆ ಪ್ರತಿನಿಧಿಸಬಹುದು.


$$C = f(Y)$$

C ಎಂದರೆ ಅನುಭೋಗ ಮತ್ತು Y ಎಂದರೆ ಆದಾಯ. ಅನುಭೋಗವು ಆದಾಯದಿಂದ ನಿರ್ಧರಿಸಲ್ಪಡುತ್ತದೆ ಎಂಬುದನ್ನು ಅನುಭೋಗ ಬಿಂಬಕವು ಸೂಚಿಸುತ್ತದೆ. ಅನುಭೋಗ ಬಿಂಬಕ ಅಥವಾ ಅನುಭೋಗ ಪ್ರವೃತ್ತಿಯು ವಿವಿಧ ಆದಾಯ ಮಟ್ಟದಲ್ಲಿ ಅನುಭೋಗದ ಮೇಲೆ ಮಾಡುವ ವಿವಿಧ ವೆಚ್ಚಗಳ ಪಟ್ಟಿಯಾಗಿದೆ. ಅನುಭೋಗ ಪಟ್ಟಿಯು ಕೋಷ್ಠಕ 10.1ರಲ್ಲಿ ನೀಡಲಾಗಿದೆ.

**ಕೋಷ್ಠಕ 10.1 ಅನುಭೋಗ ಪಟ್ಟಿ**

| **ಆದಾಯ** (Y) (ಕೋಟಿಗಳಲ್ಲಿ) | **ಅನುಭೋಗ** C (ಕೋಟಿಗಳಲ್ಲಿ) |
|---|---|
| 0 | 20 |
| 50 | 60 |
| 100 | 100 |
| 150 | 140 |
| 200 | 180 |

ಕೋಷ್ಠಕ 10.1ರಲ್ಲಿ ತೋರಿಸಿದಂತೆ, ಆದಾಯ ಹೆಚ್ಚಾದಂತೆ ಅನುಭೋಗ ವೆಚ್ಚವು ಹೆಚ್ಚಾಗುತ್ತದೆ. ಆರ್ಥಿಕ ಅಧಃಪತನ (Depression) ಕಾಲದಲ್ಲಿ ಆದಾಯ ಶೂನ್ಯವಾಗಿದ್ದಾಗ, ಜನರು ತಮ್ಮ ಹಿಂದಿನ ಉಳಿತಾಯವನ್ನು ಅನುಭೋಗಕ್ಕಾಗಿ ಖರ್ಚು ಮಾಡುತ್ತಾರೆ. ಆದಾಯ ರೂ. 50 ಕೋಟಿಗೆ ಏರಿಕೆಯಾದರೂ, ಅದು ಅನುಭೋಗ ವೆಚ್ಚ ರೂ. 60 ಕೋಟಿಯನ್ನು ಭರಿಸಲು ಸಾಕಾಗುವುದಿಲ್ಲ. ಈ ಹಂತದಲ್ಲಿ ರೂ. 10 ಕೋಟಿ ಹಿಂದಿನ ಉಳಿತಾಯವನ್ನು ಖರ್ಚು ಮಾಡಬೇಕಾಗುತ್ತದೆ. ಆದಾಯ ರೂ. 100 ಕೋಟಿಗೆ ಏರಿಕೆಯಾದಾಗ ಅನುಭೋಗ ವೆಚ್ಚವೂ ರೂ. 100 ಕೋಟಿ ಆಗಿರುತ್ತದೆ. ಈ ಹಂತದ ನಂತರ ಆದಾಯ ರೂ. 50 ಕೋಟಿಯಂತೆ ಮತ್ತು ವೆಚ್ಚವು ರೂ. 40 ಕೋಟಿ ಯಂತೆ ಏರಿಕೆಯಾಗುತ್ತದೆ. ಇದು ಅನುಭೋಗ ಹೆಚ್ಚಳವು ಆದಾಯ ಹೆಚ್ಚಳಕ್ಕಿಂತ ಕಡಿಮೆ ಇರುತ್ತದೆ ಎಂದು ತೋರಿಸುತ್ತದೆ.




**ರೇಖಾಚಿತ್ರ 10.1**

ರೇಖಾಚಿತ್ರ 10.1ರಲ್ಲಿ ಆದಾಯವನ್ನು OX ಅಕ್ಷದಲ್ಲಿ ಮತ್ತು ಅನುಭೋಗವನ್ನು OY ಅಕ್ಷದಲ್ಲಿ ಅಳತೆ ಮಾಡಲಾಗುತ್ತದೆ. OA ರೇಖೆಯು $45^0$ ಕೋನದಲ್ಲಿದೆ. ಆದಾಯ ಮತ್ತು ಅನುಭೋಗ ಎಲ್ಲಾ ಹಂತಗಳಲ್ಲೂ ಸಮಾನವಾಗಿರುತ್ತವೆ ಎಂದು ಸೂಚಿಸುತ್ತದೆ. C ರೇಖೆಯು ಅನುಭೋಗ ರೇಖೆ. ಈ ರೇಖೆಯು ಅನುಭೋಗ ವೆಚ್ಚವು ಒಂದೇ ಪ್ರಮಾಣದಲ್ಲಿ (ರೂ. 40 ಕೋಟಿಗಳು) ಬದಲಾವಣೆಯಾಗುತ್ತದೆ ಎಂಬ ಊಹೆಯನ್ನು ಅವಲಂಬಿಸಿದೆ. ಈ ರೇಖೆಯು ಏರುಮುಖ ರೇಖೆಯಾಗಿದೆ. ಅಂದರೆ ಆದಾಯ ಹೆಚ್ಚಾದಾಗ ಅನುಭೋಗ ಹೆಚ್ಚಾಗುತ್ತದೆ. B ಬಿಂದುವಿನಲ್ಲಿ C = Y ಅಥವಾ $OY_1 = OC_1$. ಆದಾಯ $OY_2$ಗೆ ಹೆಚ್ಚಾದಾಗ ಅನುಭೋಗ $OC_2$ಗೆ ಹೆಚ್ಚಾಗುತ್ತದೆ. ಆದರೆ, ಅನುಭೋಗ ಹೆಚ್ಚಳವು ಆದಾಯ ಹೆಚ್ಚಳಕ್ಕೆ ಸಮವಾಗಿರುವುದಿಲ್ಲ. ಚಿತ್ರದಲ್ಲಿ $C_1C_2 < Y_1Y_2$. ಉಳಿತಾಯವಾದ ಆದಾಯವು $SS_1$.

**ಅನುಭೋಗ ಬಿಂಬಕದ ಗುಣಲಕ್ಷಣಗಳು ಅಥವಾ ತಾಂತ್ರಿಕ ಲಕ್ಷಣಗಳು** (Properties or Technical Attributes of Consumption Function) : ಆದಾಯ ಮತ್ತು ಅನುಭೋಗದ ನಡುವಿನ ಸಂಬಂಧವನ್ನು ಎರಡು ಗುಣಲಕ್ಷಣಗಳು ಅಥವಾ ತಾಂತ್ರಿಕ ಲಕ್ಷಣಗಳು ಮಾಪನ ಮಾಡುತ್ತವೆ. ಅವುಗಳು ಯಾವುದೆಂದರೆ: (i) ಸರಾಸರಿ ಅನುಭೋಗ ಪ್ರವೃತ್ತಿ ಮತ್ತು (ii) ಸೀಮಾಂತ ಅನುಭೋಗ ಪ್ರವೃತ್ತಿ.

(i) **ಸರಾಸರಿ ಅನುಭೋಗ ಪ್ರವೃತ್ತಿ** (Average Propensity to Consume-APC) : ಸರಾಸರಿ ಅನುಭೋಗ ಪ್ರವೃತ್ತಿಯು ಒಂದು ನಿರ್ದಿಷ್ಟ ಅವಧಿಯಲ್ಲಿ ಆದಾಯ ಮತ್ತು ಅನುಭೋಗ ವೆಚ್ಚದ ನಡುವಣ ನಿಷ್ಪತ್ತಿಯಾಗಿದೆ. ಸರಾಸರಿ ಅನುಭೋಗ ಪ್ರವೃತ್ತಿಯನ್ನು ಕಂಡುಹಿಡಿಯಲು ಅನುಭೋಗ ವೆಚ್ಚವನ್ನು ಆದಾಯದಿಂದ ಭಾಗಿಸಬೇಕು.

ಸಾಂಕೇತಿಕವಾಗಿ, $APC = \frac{C}{Y}$

ಈ ಸೂತ್ರದಲ್ಲಿ C ಎಂದರೆ ಅನುಭೋಗ ಮತ್ತು Y ಎಂದರೆ ಆದಾಯ. ಸರಾಸರಿ ಅನುಭೋಗ ಪ್ರವೃತ್ತಿಯು ಅನುಭೋಗಿಸಲ್ಪಟ್ಟ ಆದಾಯದ ಪ್ರಮಾಣವಾಗಿದೆ. ಆದಾಯ ಹೆಚ್ಚಾದಂತೆ ಅನುಭೋಗದ ಮೇಲೆ ಮಾಡುವ ವೆಚ್ಚ ಕಡಿಮೆಯಾಗುತ್ತದೆ. ಆದುದರಿಂದ ಸರಾಸರಿ ಅನುಭೋಗ ಪ್ರವೃತ್ತಿ ಇಳಿಕೆಯಾಗುತ್ತದೆ. ಇನ್ನೊಂದೆಡೆಯಲ್ಲಿ ಆದಾಯ ಹೆಚ್ಚಾದಂತೆ ಸರಾಸರಿ ಉಳಿತಾಯ ಪ್ರವೃತ್ತಿ ಹೆಚ್ಚಾಗುತ್ತದೆ.

(ii) **ಸೀಮಾಂತ ಅನುಭೋಗ ಪ್ರವೃತ್ತಿ** (Marginal Propensity to Consume-MPC): ಸೀಮಾಂತ ಅನುಭೋಗ ಪ್ರವೃತ್ತಿಯು ಆದಾಯ ಬದಲಾವಣೆಯಿಂದ ಅನುಭೋಗದಲ್ಲಾಗುವ ಬದಲಾವಣೆಯ ನಿಷ್ಪತ್ತಿಯಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅದು ಆದಾಯ ಹೆಚ್ಚಳದಿಂದಾಗಿ ($\Delta Y$) ಅನುಭೋಗದಲ್ಲಾಗುವ ಹೆಚ್ಚಳವಾಗಿದೆ ($\Delta C$). ಸೀಮಾಂತ ಅನುಭೋಗ ಪ್ರವೃತ್ತಿಯನ್ನು ಕಂಡುಹಿಡಿಯಲು ಅನುಭೋಗದಲ್ಲಾದ ಹೆಚ್ಚಳವನ್ನು ಆದಾಯ ದಲ್ಲಾದ ಹೆಚ್ಚಳದಿಂದ ಭಾಗಿಸಬೇಕು.

ಸಾಂಕೇತಿಕವಾಗಿ, $MPC = \frac{\Delta c}{\Delta y}$.

ಸಾಮಾನ್ಯವಾಗಿ, ಆದಾಯ ಮತ್ತು ಅನುಭೋಗದ ನಡುವೆ ಯಾವ ರೀತಿಯ ಸಂಬಂಧವಿದೆಯೆಂದರೆ, ಆದಾಯ ಏರಿಕೆಯಾದಂತೆ ಅನುಭೋಗ ಏರಿಕೆಯಾಗುತ್ತದೆ. ಆದರೆ, ಅನುಭೋಗದ ಏರಿಕೆಯು ಆದಾಯದ ಏರಿಕೆಗಿಂತ ಕಡಿಮೆ ಇರುತ್ತದೆ. ಏರಿಕೆಯು ಯಾವಾಗಲೂ ಧನಾತ್ಮಕವಾಗಿರುತ್ತದೆ ಆದರೆ ಒಂದಕ್ಕಿಂತ ಕಡಿಮೆಯಾಗಿರುತ್ತದೆ.


ಉದಾಹರಣೆ: ರಾಷ್ಟ್ರೀಯ ಆದಾಯವು ರೂ. 1,00,000 ಕೋಟಿಗಳಿಂದ ರೂ. 1,20,000 ಕೋಟಿಗಳಿಗೆ ಹೆಚ್ಚಾದಾಗ ಮತ್ತು ಅನುಭೋಗ ವೆಚ್ಚವು ರೂ. 80,000 ಕೋಟಿಗಳಿಂದ ರೂ. 90,000 ಕೋಟಿಗಳಿಗೆ ಹೆಚ್ಚಾಗಿದೆ ಎಂದು ಭಾವಿಸೋಣ. ಹಾಗಾಗಿ,

$$MPC = \frac{\Delta c}{\Delta y}.$$

$$MPC = \frac{90000-80000}{120000-100000}$$

$$= \frac{10000}{20000} = \frac{1}{2}$$ ಅಥವಾ 0.5

ಈಗ ಸೀಮಾಂತ ಉಳಿತಾಯ ಪ್ರವೃತ್ತಿಯನ್ನು (Marginal Propensity to Save - MPS) ಸುಲಭವಾಗಿ ಕಂಡುಹಿಡಿಯಬಹುದು. ಗಳಿಸಿದ ಆದಾಯವನ್ನು ಖರ್ಚು ಮಾಡಬೇಕು ಅಥವಾ ಉಳಿಸಬೇಕು. $Y = C + S$ ಆದುದರಿಂದ ಆದಾಯದಲ್ಲಾದ ಹೆಚ್ಚಳವು ಸೀಮಾಂತ ಅನುಭೋಗ ಪ್ರವೃತ್ತಿ ಮತ್ತು ಸೀಮಾಂತ ಉಳಿತಾಯ ಪ್ರವೃತ್ತಿಗೆ ಸಮವಾಗಿರುತ್ತದೆ. $Y = MPC + MPS$. ಹಾಗಾಗಿ, $1 - MPC$.




**ರೇಖಾಚಿತ್ರ 10.2**

ರೇಖಾಚಿತ್ರ 10.2ರಲ್ಲಿ ಆದಾಯವನ್ನು OX ಅಕ್ಷದಲ್ಲಿ ಮತ್ತು ಅನುಭೋಗವನ್ನು OY ಅಕ್ಷದಲ್ಲಿ ಅಳತೆ ಮಾಡಲಾಗುತ್ತದೆ. PC ರೇಖೆಯು ಅನುಭೋಗ ಪ್ರವೃತ್ತಿಯನ್ನು ಬಿಂಬಿಸುತ್ತದೆ. ಆದಾಯ $Y_1$ ರಿಂದ $Y_2$ ಗೆ ಹೆಚ್ಚಾದಾಗ ಅನುಭೋಗ $C_1$ ನಿಂದ $C_2$ ಗೆ ಹೆಚ್ಚಾಗುತ್ತದೆ. ಆದರೆ ಆದಾಯ ಹೆಚ್ಚಾದಂತೆ ಅನುಭೋಗದಲ್ಲಿ ಪ್ರಮಾಣಬದ್ಧ ಹೆಚ್ಚಳವಾಗುವುದಿಲ್ಲ. ಆದಾಯದಲ್ಲಾದ ಬದಲಾವಣೆಯು RQ ಮತ್ತು ಅನುಭೋಗದಲ್ಲಾದ ಬದಲಾವಣೆಯು NQ. ಚಿತ್ರದಲ್ಲಿ NQ ಗಿಂತ RQ ದೊಡ್ಡದಾಗಿದೆ.

**ಅನುಭೋಗ ಬಿಂಬಕದ ಮಹತ್ವ** (Importance of Consumption Function): ಅನುಭೋಗ ಬಿಂಬಕವು ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಮಹತ್ವವನ್ನು ಹೊಂದಿದೆ. ಅವುಗಳನ್ನು ಕೆಳಗೆ ನೀಡಲಾಗಿದೆ :

1) ಅನುಭೋಗ ಬಿಂಬಕವು ಮುಖ್ಯವಾಗಿ ಆದಾಯವನ್ನು ಅವಲಂಬಿಸಿದೆ. ಆದಾಯ ಹೆಚ್ಚಳವಾದಂತೆ, ಅನುಭೋಗವೂ ಹೆಚ್ಚಾಗುತ್ತದೆ. ಆದರೆ ಹೆಚ್ಚಳದ ಪ್ರಮಾಣವು ಆದಾಯ ಹೆಚ್ಚಳದ ಪ್ರಮಾಣಕ್ಕಿಂತ ಕಡಿಮೆಯಾಗಿರುತ್ತದೆ. ಆದುದರಿಂದ, ಹೂಡಿಕೆಯನ್ನು ಹೆಚ್ಚಿಸಬೇಕಾದ ಅವಶ್ಯಕತೆ ಇದೆ. ಹಾಗಾಗಿ ಅನುಭೋಗ ಬಿಂಬಕವು ಹೂಡಿಕೆಯ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ.
2) ಅನುಭೋಗ ಬಿಂಬಕವು ಅಧಿಕ ಉತ್ಪಾದನೆಯ ಸಾಧ್ಯತೆಯನ್ನು ತಿಳಿಸುತ್ತದೆ. ಅಂತಹ ಸಂದರ್ಭದಲ್ಲಿ ಸರಕಾರವು ಸಾರ್ವಜನಿಕ ನೀತಿಯ ಮೂಲಕ ಆರ್ಥಿಕತೆಯಲ್ಲಿ ಮಧ್ಯ ಪ್ರವೇಶಿಸಬೇಕಾಗುತ್ತದೆ.
3) ಇದು ವ್ಯಾಪಾರ ವರ್ತುಲಗಳ ಬದಲಾವಣೆಗಳನ್ನು ವಿವರಿಸುತ್ತದೆ.
4) ಇದು ಅಧಿಕ ಉಳಿತಾಯದ ಅಪಾಯವನ್ನು ವಿವರಿಸುತ್ತದೆ.
5) ಇದು ಆದಾಯ ಸೃಷ್ಟಿಯ ವಿಶೇಷ ಲಕ್ಷಣವನ್ನು ನೀಡುತ್ತದೆ.
6) ರಾಷ್ಟ್ರದಲ್ಲಿ ಅಪೂರ್ಣೋದ್ಯೋಗ ಸಮತೋಲನ ಅಸ್ತಿತ್ವದಲ್ಲಿರಬಹುದು.
7) ಅನುಭೋಗ ಬಿಂಬಕವು "ಪೂರೈಕೆಯು ತನ್ನದೇ ಬೇಡಿಕೆಯನ್ನು ಸೃಷ್ಟಿಸುತ್ತದೆ" ಎನ್ನುವ ಜೆ.ಬಿ. ಸೇ ರವರ ಮಾರುಕಟ್ಟೆ ನಿಯಮವನ್ನು ನಿರರ್ಥಕಗೊಳಿಸುತ್ತದೆ.
8) ಇದು ಇಳಿಮುಖ ಸೀಮಾಂತ ಬಂಡವಾಳ ದಕ್ಷತೆಯನ್ನು ವಿವರಿಸುತ್ತದೆ.

**ಅನುಭೋಗ ಬಿಂಬಕದ ನಿರ್ಧಾರಕಗಳು** (Determinants of Consumption Function): ಅನುಭೋಗ ಬಿಂಬಕವು ವ್ಯಕ್ತಿನಿಷ್ಠ ಮತ್ತು ವಸ್ತುನಿಷ್ಠ ಅಂಶಗಳಿಂದ ಪ್ರಭಾವಿಸಲ್ಪಟ್ಟಿದೆ.

**ವ್ಯಕ್ತಿನಿಷ್ಠ ಅಂಶಗಳು** (Subjective Factors): ವ್ಯಕ್ತಿನಿಷ್ಠ ಅಂಶಗಳು ವೈಯಕ್ತಿಕ ಮತ್ತು ವ್ಯಾವಹಾರಿಕ ಸಂಸ್ಥೆಗಳ ಪ್ರೇರಣೆಗಳಿಗೆ ಸಂಬಂಧಿಸಿದೆ. ಜನರು ಉಳಿತಾಯ ಮಾಡುವಂತೆ ಅಥವಾ ಖರ್ಚು ಮಾಡದಂತೆ ಪ್ರೇರಣೆ ನೀಡುವ ಅಂಶಗಳು ಯಾವುವೆಂದರೆ ಅನಿಶ್ಚಿತ ಖರ್ಚುಗಳಿಗಾಗಿ ಮೀಸಲು, ಭವಿಷ್ಯದ ನಿರೀಕ್ಷಿತ ಅವಶ್ಯಕತೆಗಳನ್ನು ಪೂರೈಸಲು, ಚಾಲ್ತಿ ಆದಾಯವನ್ನು ವಿನಿಯೋಗಿಸುವ ಮೂಲಕ ಭವಿಷ್ಯದಲ್ಲಿ ಬೃಹತ್ ಆದಾಯವನ್ನು ಹೊಂದುವುದು, ಸ್ವಾತಂತ್ರ್ಯವನ್ನು ಅನುಭವಿಸುವ ಬಯಕೆ, ಐಶ್ವರ್ಯ ಅನುಭವಿಸುವ ಆಸೆ ಇತ್ಯಾದಿ.

ವ್ಯಾವಹಾರಿಕ ಸಂಸ್ಥೆಗಳು ಉಳಿತಾಯ ಮಾಡುವಂತೆ ಪ್ರೇರಣೆ ನೀಡುವ ಅಂಶಗಳು ಯಾವುವೆಂದರೆ ವ್ಯವಹಾರ ವನ್ನು ವಿಸ್ತರಿಸುವ ಆಸೆ, ತುರ್ತುಪರಿಸ್ಥಿತಿಯನ್ನು ಯಶಸ್ವಿಯಾಗಿ ಎದುರಿಸುವ ಆಸೆ, ಯಶಸ್ವಿ ವ್ಯವಸ್ಥಾಪನವನ್ನು ಪ್ರದರ್ಶಿಸುವ ಇಚ್ಛೆ. ಸಾಲ ತೀರಿಸುವ ಉದ್ದೇಶ, ಸವಕಳಿ ಮತ್ತು ಅಪ್ರಚಲಿತದ ಬಗ್ಗೆ ಸಾಕಷ್ಟು ಹಣಕಾಸು ಒದಗಿಸುವುದು.

**ವಸ್ತು ನಿಷ್ಠ ಅಂಶಗಳು** (Objective Factors): ವಸ್ತು ನಿಷ್ಠ ಅಂಶಗಳು ಯಾವುವೆಂದರೆ ಆದಾಯ ವಿತರಣೆ, ಬಡ್ಡಿದರದಲ್ಲಿ ಬಾರೀ ಬದಲಾವಣೆ, ವ್ಯವಹಾರ ನಿರೀಕ್ಷೆಗಳಲ್ಲಿ ಬದಲಾವಣೆಗಳು, ಅನಿರೀಕ್ಷಿತ ಲಾಭ–ನಷ್ಟಗಳು, ನಗದು ಆಯ್ಕೆ, ಕೂಲಿ ಹಂತಗಳಲ್ಲಿ ಬದಲಾವಣೆ, ಉಳಿತಾಯದ ಮನೋವೃತ್ತಿ, ಇತ್ಯಾದಿ.

**ಅನುಭೋಗ ಪ್ರವೃತ್ತಿಯನ್ನು ಹೆಚ್ಚಿಸುವ ಕ್ರಮಗಳು** (Measure to raise propensity to consume): ಬಡವರ ಪರವಾಗಿ ಆದಾಯದ ಮರುಹಂಚಿಕೆ,ಕೂಲಿ ಹೆಚ್ಚಳ, ಅಧಿಕ ಸಾಮಾಜಿಕ ಭದ್ರತಾ ಕ್ರಮಗಳು, ಅಗ್ಗದ ಮತ್ತು ಸುಲಭದ ಸಾಲ ಸೌಕಯಗಳು, ವಿವಿಧ ಮಾಧ್ಯಮಗಳ ಮೂಲಕ ಪರಿಣಾಮಕಾರಿ ಜಾಹಿರಾತು, ಉತ್ತಮ ಸಾರಿಗೆ, ನಗರೀಕರಣ ಮುಂತಾದ ಕ್ರಮಗಳ ಮೂಲಕ ಅನುಭೋಗ ಪ್ರವೃತ್ತಿಯನ್ನು ಹೆಚ್ಚಿಸಬಹುದು.

## 10.4 ಹೂಡಿಕೆ ಬಿಂಬಕ (INVESTMENT FUNCTION)

ಕೇನ್ಸ್ ಉದ್ಯೋಗ ಸಿದ್ಧಾಂತದಲ್ಲಿ ಹೂಡಿಕೆ ಬಿಂಬಕಕ್ಕೆ ತುಂಬಾ ಮಹತ್ವವನ್ನು ನೀಡಲಾಗಿದೆ. ಉದ್ಯೋಗವು ಪರಿಣಾಮಕಾರಿ ಬೇಡಿಕೆಯನ್ನು ಅವಲಂಬಿಸಿದೆ. (ಪರಿಣಾಮಕಾರಿ ಬೇಡಿಕೆಯು ಸಮಗ್ರ ಬೇಡಿಕೆ ಮತ್ತು ಸಮಗ್ರ ಪೂರೈಕೆಯು ಸಮವಾಗಿರುವ ಸ್ಥಿತಿಯಾಗಿದೆ). ಪರಿಣಾಮಕಾರಿ ಬೇಡಿಕೆಯು ಆದಾಯ, ಉತ್ಪನ್ನ ಮತ್ತು ಉದ್ಯೋಗವನ್ನು ನಿರ್ಧರಿಸುತ್ತದೆ. ಹೂಡಿಕೆ ಮತ್ತು ಅನುಭೋಗ ಪರಿಣಾಮಕಾರಿ ಬೇಡಿಕೆಯ ಎರಡು ಪ್ರಮುಖ ಭಾಗಗಳು. ಇವೆರಡರಲ್ಲಿ ಹೂಡಿಕೆ ಅತೀ ಮಹತ್ವದ ಚಲಕ. ಅನುಭೋಗ ಅಲ್ಪಾವಧಿಯಲ್ಲಿ ಸ್ಥಿರವಾಗಿರುತ್ತದೆ.

ಹೂಡಿಕೆ ಎಂದರೇನು? ಕೇನ್ಸ್‌ರವರು ನೀಡಿದ ಹೂಡಿಕೆಯ ಅರ್ಥವು ಸಾಮಾನ್ಯ ಅರ್ಥಕ್ಕಿಂತ ವಿಭಿನ್ನವಾಗಿದೆ. ಸಾಮಾನ್ಯವಾಗಿ ಹೂಡಿಕೆ ಎಂದರೆ ಶೇರುಗಳು, ಡಿಬೆಂಚರುಗಳು, ಸರಕಾರಿ ಬಾಂಡುಗಳು, ಇತ್ಯಾದಿಗಳನ್ನು ಕೊಂಡುಕೊಳ್ಳುವುದು. ಆದರೆ ಕೇನ್ಸ್‌ರ ಪ್ರಕಾರ ಹೂಡಿಕೆ ಎಂದರೆ ರಾಷ್ಟ್ರದ ಬಂಡವಾಳ ಸರಕುಗಳ ಭೌತಿಕ ಸಂಗ್ರಹಣೆಗೆ ಆಗುವ ಸೇರ್ಪಡೆ. ಉದಾಹರಣೆಗೆ, ನೂತನ ಕಾರ್ಖಾನೆಯ ಕಟ್ಟಡಗಳು, ಯಂತ್ರ, ಸಾಧನ ಸಲಕರಣೆಗಳು ಇತ್ಯಾದಿ. ಹೂಡಿಕೆಯು ಸಿದ್ಧ ಸರಕುಗಳ ಸಂಗ್ರಹಣೆ, ಉತ್ಪಾದನಾ ಹಂತದಲ್ಲಿರುವ ಸರಕುಗಳು, ಸ್ಥಿರ ಬಂಡವಾಳ ಇತ್ಯಾದಿಗಳನ್ನು ಒಳಗೊಂಡಿರುತ್ತದೆ

ಮೇಲೆ ಹೇಳಿದಂತೆ ಹೂಡಿಕೆಯು ಅತೀ ಮಹತ್ವದ ಚಲಕ. ಒಂದು ಸಮುದಾಯದ ಆದಾಯ ಹೆಚ್ಚಾದಂತೆ, ಅನುಭೋಗವು ಹೆಚ್ಚಾಗುತ್ತದೆ. ಆದರೆ ಆದಾಯ ಹೆಚ್ಚಾದ ದರದಲ್ಲಿ ಅನುಭೋಗ ಹೆಚ್ಚಾಗುವುದಿಲ್ಲ. ಆದಾಯ ಮತ್ತು ಅನುಭೋಗದ ನಡುವೆ ಅಂತರ ಇರುತ್ತದೆ. ಉದ್ಯೋಗ/ಉತ್ಪಾದನೆ ಹೆಚ್ಚಿಸಲು ಈ ಅಂತರವನ್ನು ತುಂಬಬೇಕು. ಈ ಅಂತರವೇ ಉಳಿತಾಯ ಮತ್ತು ಈ ಉಳಿತಾಯ ಹೂಡಿಕೆಯಾಗುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಹೂಡಿಕೆಯನ್ನು ಹೆಚ್ಚಿಸದೆ ಉದ್ಯೋಗವನ್ನು ಹೆಚ್ಚಿಸಲು ಸಾಧ್ಯವಿಲ್ಲ

**ಹೂಡಿಕೆಯ ವಿಧಗಳು:**

**1. ಖಾಸಗಿ ಹೂಡಿಕೆ ಮತ್ತು ಸಾರ್ವಜನಿಕ ಹೂಡಿಕೆ:** ಹೂಡಿಕೆಯನ್ನು ಖಾಸಗಿ ಮತ್ತು ಸಾರ್ವಜನಿಕ ಹೂಡಿಕೆಯೆಂದು ವರ್ಗೀಕರಿಸಬಹುದು. ಖಾಸಗಿ ಹೂಡಿಕೆಯು ಖಾಸಗಿ ಹೂಡಿಕೆದಾರರು, ಸಂಸ್ಥೆಗಳ ಮಾಲಕರು ಮತ್ತು ಕೈಗಾರಿಕೋದ್ಯಮಿಗಳು ಮಾಡುವ ಹೂಡಿಕೆಯಾಗಿದೆ. ಸಾರ್ವಜನಿಕ ಹೂಡಿಕೆಯು ಸರಕಾರಿ ಸಂಸ್ಥೆಗಳು ಮಾಡುವ ಹೂಡಿಕೆಯಾಗಿದೆ. ಅಂತಹ ಹೂಡಿಕೆಯಿಂದ ಸಾಮಾಜಿಕ ಅನುಕೂಲತೆಗಳು ಲಭ್ಯವಾಗುತ್ತವೆ.

**2. ಪ್ರೇರಿತ ಹೂಡಿಕೆ ಮತ್ತು ಸ್ವಾಯತ್ತ ಹೂಡಿಕೆ:** ಹೂಡಿಕೆಯನ್ನು ಇನ್ನೊಂದು ರೀತಿಯಲ್ಲಿ ಪ್ರೇರಿತ ಮತ್ತು ಸ್ವಾಯತ್ತ ಹೂಡಿಕೆ ಎಂದು ವರ್ಗೀಕರಿಸಬಹುದು. ಆದಾಯ ಮಟ್ಟದಲ್ಲಿ ಬದಲಾವಣೆಯಾದಾಗ ಜನರ ಹೂಡಿಕೆಯಲ್ಲಾಗುವ ಬದಲಾವಣೆಯನ್ನು ಪ್ರೇರಿತ ಹೂಡಿಕೆ ಎಂದು ಪರಿಗಣಿಸಲಾಗುತ್ತದೆ. ಹಾಗಾಗಿ, ಪ್ರೇರಿತ ಹೂಡಿಕೆಯು ಆದಾಯ ಸ್ಥಿತಿ ಸ್ಥಾಪಕತ್ವವನ್ನು ಹೊಂದಿದೆ. ಸರಕಾರವು ಆರ್ಥಿಕ ಮತ್ತು ಸಾಮಾಜಿಕ ಮೂಲ ಸೌಕರ್ಯಗಳನ್ನು ಸೃಷ್ಟಿಸಲು ಮಾಡುವ ಹೂಡಿಕೆಯನ್ನು ಸ್ವಾಯತ್ತ ಹೂಡಿಕೆ ಎನ್ನುತ್ತಾರೆ. ಅದಕ್ಕೆ ಆದಾಯ ಸ್ಥಿತಿಸ್ಥಾಪಕತ್ವ ಇರುವುದಿಲ್ಲ.

**3. ಯೋಜಿತ ಹೂಡಿಕೆ ಮತ್ತು ಯೋಜನಾರಹಿತ ಹೂಡಿಕೆ:** ಯೋಜಿತ ಹೂಡಿಕೆ ಎಂದರೆ ಹೂಡಿಕೆ ಮಾಡಲು ಉದ್ದೇಶಿಸಿದ ಅಥವಾ ಯೋಜಿಸಿದ ಪ್ರಮಾಣ. ಯೋಜನಾರಹಿತ ಹೂಡಿಕೆಯು ಈಗಾಗಲೇ ಮಾಡಿರುವ ಹೂಡಿಕೆಯಾಗಿದೆ.

**4. ಒಟ್ಟು ಹೂಡಿಕೆ ಮತ್ತು ನಿವ್ವಳ ಹೂಡಿಕೆ** (Gross Investment and Net Investment) : ಒಟ್ಟು ಹೂಡಿಕೆ ಎಂದರೆ ಪಡೆದ ಆಸ್ತಿಯ ಒಟ್ಟು ಮೌಲ್ಯ. ನಿವ್ವಳ ಹೂಡಿಕೆ ಎಂದರೆ ಒಟ್ಟು ಹೂಡಿಕೆ–ಸವಕಳಿ.

**ಹೂಡಿಕೆಯ ನಿರ್ಧಾರಕಗಳು:** ಹೂಡಿಕೆಯು ಎರಡು ಅಂಶಗಳನ್ನು ಅವಲಂಬಿಸಿದೆ. ಅವುಗಳೆಂದರೆ ಬಂಡವಾಳದ ಸೀಮಾಂತ ದಕ್ಷತೆ ಮತ್ತು ಬಡ್ಡಿ ದರ.

ಕೇನ್ಸ್ ಪ್ರಕಾರ ಹೂಡಿಕೆಯ ಮಟ್ಟವನ್ನು ನಿರ್ಧರಿಸುವಲ್ಲಿ ಬಂಡವಾಳ ಸೀಮಾಂತ ದಕ್ಷತೆಯು (Marginal Efficiency of Capital - MEC) ಬಡ್ಡಿ ದರಕ್ಕಿಂತ ಪ್ರಮುಖ ಪಾತ್ರ ವಹಿಸುತ್ತದೆ. ಬಂಡವಾಳ ಸೀಮಾಂತ ದಕ್ಷತೆ ಎಂದರೆ ಹೊಸ ಬಂಡವಾಳ ಆಸ್ತಿಗಳ ನಿರೀಕ್ಷಿತ ಪ್ರತಿಫಲ. ಇನ್ನೊಂದು ರೀತಿಯಲ್ಲಿ ವ್ಯಾಖ್ಯಾನಿಸುವುದಾದರೆ, ಅದು ಸೀಮಾಂತ ಬಂಡವಾಳ ಆಸ್ತಿಯ ವೆಚ್ಚಕ್ಕಿಂತ ಅಧಿಕವಾಗಿರುವ ನಿರೀಕ್ಷಿತ ಪ್ರತಿಫಲ ದರ. ಬಂಡವಾಳ ಸೀಮಾಂತ ದಕ್ಷತೆಯು ನಿರೀಕ್ಷಿತ ಪ್ರತಿಫಲ ಮತ್ತು ಪೂರೈಕೆ ಬೆಲೆಯನ್ನು ಅವಲಂಬಿಸಿದೆ.

ನಿರೀಕ್ಷಿತ ಪ್ರತಿಫಲವು (Prospective Yield) ಬಂಡವಾಳ ಸರಕುಗಳಿಂದ ಜೀವನ ಪರ್ಯಾಂತ ನೀಡಬಹುದಾದ ಒಟ್ಟು ನಿವ್ವಳ ಪ್ರತಿಫಲವಾಗಿದೆ. ಪೂರೈಕೆ ಬೆಲೆಯು (Supply Price) ಹೊಸ ಬಂಡವಾಳವನ್ನು ಉತ್ಪಾದಿಸುವ ವೆಚ್ಚವಾಗಿದೆ. ಇದನ್ನು ಬದಲಿ ವೆಚ್ಚವೆಂದೂ ಕರೆಯುತ್ತಾರೆ.

ಒಂದು ವೇಳೆ ನಿರೀಕ್ಷಿತ ಪ್ರತಿಫಲವು ಪೂರೈಕೆ ಬೆಲೆಗಿಂತ ಹೆಚ್ಚಾಗಿದ್ದಲ್ಲಿ ಬಂಡವಾಳ ಸೀಮಾಂತ ದಕ್ಷತೆಯು ಅಧಿಕವಾಗಿ, ಹೂಡಿಕೆಯೂ ಅಧಿಕವಾಗುತ್ತದೆ. ಪೂರೈಕೆ ಬೆಲೆಯು ಕಡಿಮೆ ಇದ್ದಾಗ, ಬಂಡವಾಳ ಸೀಮಾಂತ ದಕ್ಷತೆಯು ಜಾಸ್ತಿಯಾಗುತ್ತದೆ.

ಇನ್ನೊಂದೆಡೆಯಲ್ಲಿ, ಹೂಡಿಕೆಯು ಬಡ್ಡಿದರದಿಂದಲೂ ನಿರ್ಧರಿಸಲ್ಪಡುತ್ತದೆ. ಬಡ್ಡಿದರ ಅಧಿಕವಾದರೆ, ಹೂಡಿಕೆ ಕಡಿಮೆಯಾಗುತ್ತದೆ. ಇದಕ್ಕೆ ಕಾರಣ ಜನ ಬಡ್ಡಿ ದರವನ್ನು ಬಂಡವಾಳ ಸೀಮಾಂತ ದಕ್ಷತೆಯೊಂದಿಗೆ ತುಲನೆ ಮಾಡುತ್ತಾರೆ. ಅದೇ ರೀತಿ, ಬಡ್ಡಿ ದರ ಕಡಿಮೆಯಾದಾಗ, ಹೂಡಿಕೆ ಅಧಿಕವಾಗುತ್ತದೆ. ಹಾಗಾಗಿ, ಹೂಡಿಕೆಯು ಚಾಲ್ತಿ ಬಡ್ಡಿದರವನ್ನು ಅವಲಂಬಿಸಿದೆ.

**ಹೂಡಿಕೆ ಉತ್ತೇಜಿಸುವ ಕ್ರಮಗಳು** (Measures to stimulate Investment) : ಹೂಡಿಕೆ ಉತ್ತೇಜಿಸಲು ತೆರಿಗೆ ರಿಯಾಯಿತಿ, ಸರಕಾರಿ ಹೂಡಿಕೆ, ಕಡಿಮೆ ಬಡ್ಡಿದರ, ಬೆಲೆ ಮಟ್ಟದಲ್ಲಿ ಸ್ಥಿರತೆ, ಕೆಲವು ಏಕಸ್ವಾಮ್ಯ ಸೌಕರ್ಯಗಳನ್ನು ರದ್ದುಗೊಳಿಸುವುದು, ಸ್ಪರ್ಧಾತ್ಮಕ ಮಾರುಕಟ್ಟೆ ರಚನೆ, ಹೊಸ ತಂತ್ರಜ್ಞಾನ ಮತ್ತು ಅವಿಷ್ಕಾರ ಮುಂತಾದ ಕ್ರಮಗಳನ್ನು ಕೈಗೊಳ್ಳಬಹುದು.

## 10.5 ಗುಣಕ (MULTIPLIER)

ಗುಣಕ ಪರಿಕಲ್ಪನೆಯು ಆರ್ಥಿಕ ವಿಶ್ಲೇಷಣೆಗೆ ಕೇನ್ಸ್‌ರವರು ನೀಡಿದ ಪ್ರಮುಖ ಕಾಣಿಕೆಯಾಗಿದೆ. ಕೇನ್ಸ್‌ರವರ ಉದ್ಯೋಗ ಸಿದ್ಧಾಂತದಲ್ಲಿ ಗುಣಕ ಪ್ರಮುಖ ಸ್ಥಾನ ಪಡೆದಿದೆ. ಗುಣಕ ಪರಿಕಲ್ಪನೆಯನ್ನು ಮೊದಲು ಸಂಶೋಧಿಸಿದವರು ಲಾರ್ಡ್ ಆರ್.ಎಫ್. ಖಾನ್. ಕೇನ್ಸ್ ಗುಣಕ ಪರಿಕಲ್ಪನೆಯನ್ನು ತನ್ನ ಉದ್ಯೋಗ ಸಿದ್ಧಾಂತದಲ್ಲಿ ಯಶಸ್ವಿಯಾಗಿ ಬಳಸಿಕೊಂಡರು.

ಕೇನ್ಸ್ ಪ್ರಕಾರ, ಆರಂಭದ ಹೂಡಿಕೆಯ ಹೆಚ್ಚಳದಿಂದಾಗಿ ಅಂತಿಮವಾಗಿ ಆದಾಯದಲ್ಲಿ ಹಲವು ಪಟ್ಟು ಹೆಚ್ಚಳ ವಾಗುತ್ತದೆ. ಹೂಡಿಕೆಯಲ್ಲಿನ ಬದಲಾವಣೆ ಅನುಭೋಗದಲ್ಲಿ ಬದಲಾವಣೆ ಉಂಟುಮಾಡುತ್ತದೆ. ಅಂತಿಮವಾಗಿ ಆದಾಯ ದಲ್ಲಿ ಬದಲಾವಣೆ ಉಂಟಾಗುತ್ತದೆ. ಆರಂಭದ ಹೂಡಿಕೆಯಲ್ಲಿನ ಬದಲಾವಣೆಯಿಂದಾಗಿ ಆದಾಯದಲ್ಲಾಗುವ ಒಟ್ಟು ಬದಲಾವಣೆಯ ಅನುಪಾತವನ್ನು ಗುಣಕ ಎನ್ನುತ್ತಾರೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಗುಣಕವು ಆದಾಯದ ಹೆಚ್ಚಳ ಮತ್ತು ಹೂಡಿಕೆಯ ಹೆಚ್ಚಳಗಳ ನಡುವಿನ ಪರಿಮಾಣಾತ್ಮಕ ಅನುಪಾತವನ್ನು ವಿವರಿಸುತ್ತದೆ. ಆದುದರಿಂದ $K = \frac{\Delta y}{\Delta I}$. ಈ ಸೂತ್ರದಲ್ಲಿ K ಎಂದರೆ ಗುಣಕ, $\Delta y$ ಆದಾಯದ ಹೆಚ್ಚಳ ಮತ್ತು $\Delta I$ ಹೂಡಿಕೆಯ ಹೆಚ್ಚಳ.

ಉದಾಹರಣೆ: ಒಂದು ವೇಳೆ ಹೂಡಿಕೆಯು ರೂ. 500 ಕೋಟಿಗಳಿಂದ ರೂ. 700 ಕೋಟಿಗಳಿಗೆ ಏರಿಕೆಯಾದಲ್ಲಿ, ಆದಾಯವು ರೂ. 1000 ಕೋಟಿಗಳಿಂದ ರೂ. 2000 ಕೋಟಿಗಳಿಗೆ ಏರಿಕೆಯಾಗಬಹುದು. ಆದುದರಿಂದ

$$\text{ಗುಣಕ} = \frac{2000 - 1000}{700 - 500}$$

$$= \frac{1000}{200}$$

$$= 5.$$

**ಗುಣಕ ಮತ್ತು ಸೀಮಾಂತ ಅನುಭೋಗ ಪ್ರವೃತ್ತಿ** (Multiplier and Marginal Propensity to Consume - MPC): ಆರಂಭಿಕ ಹೂಡಿಕೆಯ ಹೆಚ್ಚಳದಿಂದಾಗುವ ಗುಣಕ ಪರಿಣಾಮವು ಸೀಮಾಂತ ಅನುಭೋಗ ಪ್ರವೃತ್ತಿಯನ್ನು ಅವಲಂಬಿಸಿದೆ. ಗುಣಕದ ಮೌಲ್ಯವು ಸೀಮಾಂತ ಅನುಭೋಗ ಪ್ರವೃತ್ತಿಯಿಂದ ನಿರ್ಧರಿಸಲ್ಪಡುತ್ತದೆ. ಸೀಮಾಂತ ಅನುಭೋಗ ಪ್ರವೃತ್ತಿ ಹೆಚ್ಚಾದರೆ, ಗುಣಕವು ಹೆಚ್ಚಾಗುತ್ತದೆ. ಇದರ ವಿರುದ್ಧವೂ ಸತ್ಯ. ಆದರೆ ಗುಣಕದ ಮೌಲ್ಯ ಯಾವಾಗಲೂ ಒಂದಕ್ಕಿಂತ ಹೆಚ್ಚಾಗಿರುತ್ತದೆ. ಅಂದರೆ ಗುಣಕವು ಯಾವಾಗಲೂ ಧನಾತ್ಮಕವಾಗಿರುತ್ತದೆ. ಗುಣಕವನ್ನು ಈ ಕೆಳಗಿನ ಸೂತ್ರದಿಂದ ಕಂಡುಹಿಡಿಯಬಹುದು.

$$K = \frac{1}{1 - MPC}$$

ಒಂದು ವೇಳೆ ಒಂದರಿಂದ MPCಯನ್ನು ಕಳೆದರೆ, ಸೀಮಾಂತ ಉಳಿತಾಯ ಪ್ರವೃತ್ತಿ ಸಿಗುತ್ತದೆ. (Marginal Propensity to Save - MPS) ಆಗ, ಮೇಲಿನ ಸೂತ್ರವನ್ನು ಕೆಳಗಿನಂತೆ ಬರೆಯಬಹುದು.

$$K = \frac{1}{MPS}$$


**ಗುಣಕದ ಕಾರ್ಯ ವಿಧಾನ** (Working of Multiplier) : ಒಂದು ಹೊಸ ಹೂಡಿಕೆಯು ಅಷ್ಟೇ ಪ್ರಮಾಣದ ಹೆಚ್ಚುವರಿ ಆದಾಯ ಸೃಷ್ಟಿಸುತ್ತದೆ. ಆದರೆ ಈ ಕಾರ್ಯ ವಿಧಾನ ಇಲ್ಲಿಗೆ ನಿಲ್ಲುವುದಿಲ್ಲ. ಆದಾಯದಲ್ಲಾದ ಹೆಚ್ಚಳವು ಅನುಭೋಗ ಹೆಚ್ಚಳಕ್ಕೆ ಕಾರಣವಾಗುತ್ತದೆ. ಅನುಭೋಗದ ಮೇಲಾಗುವ ಹೆಚ್ಚುವರಿ ವೆಚ್ಚವು ಹೊಸ ಆದಾಯಕ್ಕೆ ಆಧಾರವಾಗುತ್ತದೆ. ಹೊಸ ಆದಾಯವು ಪುನಃ ಹೊಸ ಅನುಭೋಗ ವೆಚ್ಚಕ್ಕೆ ಕಾರಣವಾಗುತ್ತದೆ. ಈ ರೀತಿ ಮುಂದುವರಿಯುತ್ತಾ ಹೋಗಿ ಕೊನೆಗೆ ಆರಂಭಿಕ ಹೆಚ್ಚಳವು ಅಂತಿಮವಾಗಿ ಹಲವು ಪಟ್ಟು ಹೆಚ್ಚಳಕ್ಕೆ ಕಾರಣವಾಗುತ್ತದೆ.

ಹೊಸ ಹೂಡಿಕೆಯು ರೂ. 100 ಕೋಟಿಗಳು ಎಂದು ಭಾವಿಸೋಣ. ಇದು ರೂ. 100 ಕೋಟಿ ಹೆಚ್ಚುವರಿ ಆದಾಯಕ್ಕೆ ಕಾರಣವಾಗುತ್ತದೆ. ಹೆಚ್ಚುವರಿ ಆದಾಯವು ಅನುಭೋಗದ ಮೇಲೆ ವ್ಯಯಿಸಲ್ಪಡುತ್ತದೆ. ಆದರೆ ಅನುಭೋಗವು ಸೀಮಾಂತ ಅನುಭೋಗ ಪ್ರವೃತ್ತಿಯನ್ನು (MPC) ಅವಲಂಬಿಸಿದೆ. MPCಯು $\frac{1}{2}$ ಅಥವಾ 0.5 ಎಂದು ಭಾವಿಸೋಣ. ಆದುದರಿಂದ, ಒಟ್ಟು ಅನುಭೋಗ ವೆಚ್ಚವು ರೂ. 50 ಕೋಟಿಗಳು. ಮುಂದಿನ ಹಂತದಲ್ಲಿ ರೂ. 50 ಕೋಟಿಗಳು ಆದಾಯವಾಗುತ್ತದೆ. ರೂ. 50 ಕೋಟಿ ಆದಾಯದಲ್ಲಿ ರೂ. 25 ಕೋಟಿ ಅನುಭೋಗದ ಮೇಲೆ ವ್ಯಯಿಸಲ್ಪಡುತ್ತದೆ. ಈ ಕಾರ್ಯ ವಿಧಾನವು ಅನುಭೋಗ ಶೂನ್ಯವಾಗುವವರೆಗೆ ಮುಂದುವರಿಯುತ್ತದೆ. ಒಟ್ಟು ಆದಾಯ ಸೃಷ್ಟಿಯು 100 + 50 + 25 + .... = 200 ಕೋಟಿಗಳು.

$$\text{ವಿನಿಮಯದ ಗುಣಕವು } \frac{1}{MPS} = \frac{1}{1/2}$$

K = 2. (100 x 2 = 200 ಕೋಟಿಗಳು).

ಹಾಗಾದರೆ, ಹೂಡಿಕೆಯಲ್ಲಾದ ಹೆಚ್ಚಳದಿಂದ ಆದಾಯವು ಎರಡು ಪಟ್ಟು ಹೆಚ್ಚಾಯಿತು. ಸೀಮಾಂತ ಅನುಭೋಗ ಪ್ರವೃತ್ತಿ ಅಥವಾ ಸೀಮಾಂತ ಉಳಿತಾಯ ಪ್ರವೃತ್ತಿ ತಿಳಿದುಕೊಂಡರೆ ಗುಣಕವನ್ನು ಯಾವಾಗಲೂ ಲೆಕ್ಕ ಹಾಕಬಹುದು. ಗುಣಕದ ಗಾತ್ರವು ಸೀಮಾಂತ ಅನುಭೋಗ ಪ್ರವೃತ್ತಿಯ ಗಾತ್ರದೊಂದಿಗೆ ನೇರವಾಗಿ ಬದಲಾಗುತ್ತದೆ.




**ರೇಖಾಚಿತ್ರ 10.3**

ರೇಖಾಚಿತ್ರ 10.3ರಲ್ಲಿ I I ಮೂಲ ಹೂಡಿಕೆ ಮತ್ತು OY ಆದಾಯವಾಗಿದೆ. SS ಉಳಿತಾಯ ರೇಖೆ. ಹೂಡಿಕೆ ರೇಖೆ ಮತ್ತು ಉಳಿತಾಯ ರೇಖೆ E ಬಿಂದುವಿನಲ್ಲಿ ಪರಸ್ಪರ ಛೇದಿಸುತ್ತವೆ. OY ಸಮತೋಲನ ಮಟ್ಟದ ಆದಾಯವಾಗಿದೆ. ಹೂಡಿಕೆಯಲ್ಲಿ ಹೆಚ್ಚಳವಾದಾಗ ಹೂಡಿಕೆ ರೇಖೆಯು I I ಬದಲು $I_1$ $I_1$ ಆಗುತ್ತದೆ. ಅದು ಉಳಿತಾಯ ರೇಖೆಯನ್ನು ಛೇದಿಸುವ ಬಿಂದುವು $E_1$ ಆಗಿರುತ್ತದೆ. ಹಾಗೂ ಹೊಸ ಆದಾಯ ಸಮತೋಲನ ಮಟ್ಟವು $OY_1$ ಆಗುತ್ತದೆ. ಹಾಗಾದರೆ, ಆರಂಭಿಕ ಹೂಡಿಕೆ ಹೆಚ್ಚಳವು ಆದಾಯದಲ್ಲಿ ಭಾರೀ ಹೆಚ್ಚಳಕ್ಕೆ ಕಾರಣವಾಗುತ್ತದೆ. ಚಿತ್ರದಲ್ಲಿ I I ಮತ್ತು $I_1$ $I_1$ ನಡುವಿನ ಅಂತರಕ್ಕಿಂತ Y ಮತ್ತು $Y_1$ ನಡುವಿನ ಅಂತರ ಅಧಿಕವಾಗಿದೆ.

**ಗುಣಕ ಪರಿಕಲ್ಪನೆಯ ಮಿತಿಗಳು** (Limitations of the Multiplier Concept) **:** ಗುಣಕ ಕಾರ್ಯ ವಿಧಾನವು ಆದರ್ಶವಾದುದು. ಆದರೆ ನಿಜ ಆಚರಣೆಯಲ್ಲಿ, ಗುಣಕದ ಪರಿಣಾಮಗಳು ಯಾವಾಗಲೂ ಆದರ್ಶ ಸ್ಥಿತಿಯಲ್ಲಿ ಊಹಿಸಿದಷ್ಟು ಇರುವುದಿಲ್ಲ. ಗುಣಕ ಕಾರ್ಯವಿಧಾನದಲ್ಲಿ ಹಲವಾರು ತೊಂದರೆಗಳು ಮತ್ತು ಮಿತಿಗಳಿವೆ. ಗುಣಕ ಪರಿಣಾಮವನ್ನು ಕಡಿಮೆ ಮಾಡುವ ಅಂಶಗಳನ್ನು ತಾಂತ್ರಿಕವಾಗಿ **"ಸೋರಿಕೆಗಳು"** (Leakages) ಎಂದು ಕರೆಯುತ್ತಾರೆ. ಸೋರಿಕೆಗಳು ಹೊಸ ಹೂಡಿಕೆ ಪ್ರಭಾವವನ್ನು ದುರ್ಬಲಗೊಳಿಸುತ್ತವೆ. ಉನ್ನತ ಉಳಿತಾಯ, ಬಲಿಷ್ಠ ದ್ರವ್ಯತೆ ಆಯ್ಕೆ, ಹಳೆ ಶೇರು ಮತ್ತು ಭದ್ರತೆಗಳನ್ನು ಕೊಂಡುಕೊಳ್ಳುವುದು, ಹೆಚ್ಚುವರಿ ಆದಾಯವನ್ನು ಸಾಲ ಮರುಪಾವತಿಗೆ ಬಳಸುವುದು, ಹಣದುಬ್ಬರ, ಆಮದು ಸರಕುಗಳನ್ನು ಕೊಂಡುಕೊಳ್ಳುವುದು, ಅಧಿಕ ತೆರಿಗೆ ದರ, ಮುಂತಾದುವುಗಳು ಕೆಲವು ಸೋರಿಕೆಗಳು.

**ಗುಣಕದ ಮಹತ್ವ** (Importance of Multiplier) **:** ಗುಣಕದ ಪರಿಕಲ್ಪನೆಯು ಜನರಲ್ ಥಿಯರಿಗೆ ಕೇನ್ಸ್ ರವರ ಪ್ರಮುಖ ಕಾಣಿಕೆಯಾಗಿದೆ. ಅದರ ಮಹತ್ವಗಳನ್ನು ಕೆಳಗೆ ನೀಡಲಾಗಿದೆ.

1. ಗುಣಕವು ಆದಾಯ ಮತ್ತು ಉದ್ಯೋಗ ಸಿದ್ಧಾಂತದಲ್ಲಿ ಹೂಡಿಕೆಯ ಮಹತ್ವವನ್ನು ಎತ್ತಿ ತೋರಿಸುತ್ತದೆ.
2. ಅದು ಆರ್ಥಿಕ ಅಧಃಪತನವನ್ನು ನಿಯಂತ್ರಿಸಲು ಸಹಾಯಕಾರಿಯಾಗಿದೆ.

3. ಗುಣಕವು ಉಳಿತಾಯ ಮತ್ತು ಹೂಡಿಕೆಯ ನಡುವೆ ಸಮಾನತೆ ತರುತ್ತದೆ.

4. ಆಧುನಿಕ ರಾಷ್ಟ್ರಗಳು ಆರ್ಥಿಕ ನೀತಿಯನ್ನು ರಚಿಸುವಲ್ಲಿ ಗುಣಕವು ಮಹತ್ವದ ಸಾಧನವಾಗಿದೆ.

5. ಗುಣಕವು ಕೊರತೆ ಹಣಕಾಸಿನ ಮಹತ್ವವನ್ನು ತೋರಿಸುತ್ತದೆ.

6. ಅದು ಆರ್ಥಿಕ ಚಟುವಟಿಕೆಗಳಲ್ಲಿ ಸಾರ್ವಜನಿಕ ಹೂಡಿಕೆಯ ಮಹತ್ವವನ್ನು ತೋರಿಸುತ್ತದೆ.

7. ಪೂರ್ಣೋದ್ಯೋಗ ನೀತಿಯನ್ನು ರಚಿಸಲು ಗುಣಕ ಪರಿಕಲ್ಪನೆ ಸಹಕಾರಿಯಾಗಿದೆ.

ಜನರಲ್ ಥಿಯರಿಯು ರೂಢಿಯ ನೀತಿಗಳಿಗೆ ಮಾರ್ಗದರ್ಶಕ. ಅದು ಪ್ರಸ್ತುತ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಹಲವು ಕಾರ್ಯಕ್ರಮಗಳನ್ನು ನೀಡುತ್ತದೆ. ಅದು ಆರ್ಥಿಕ ಸಮಸ್ಯೆಗಳನ್ನು ವಿಶಾಲ ದೃಷ್ಟಿಕೋನದಿಂದ ನೋಡಲು ಸಹಾಯಕಾರಿಯಾಗಿದೆ. ಜನರಲ್ ಥಿಯರಿಯ ಮಹತ್ವದ ಅಂಶವೇನೆಂದರೆ ಅದು ನಿರುದ್ಯೋಗ ಸಮಸ್ಯೆಯನ್ನು ವಿವೇಚನೆಯಿಂದ ಮತ್ತು ನೈಜವಾಗಿ ಚರ್ಚಿಸಿರುವುದು. ಆರ್ಥಿಕ ಕುಸಿತದ ಕಾಲದಲ್ಲಿ ಸಾರ್ವಜನಿಕ ಕಾರ್ಯಕ್ರಮಗಳು ಮತ್ತು ಬಡ್ಡಿದರವನ್ನು ಕಡಿಮೆ ಮಾಡುವ ಅಗ್ಗದ ಹಣದ ಯೋಜನೆಯನ್ನು ಜಾರಿಗೆ ತರಬೇಕೆಂದು ಕೇನ್ಸ್ ಅಭಿಪ್ರಾಯ ಪಟ್ಟಿದ್ದಾರೆ. ಆರ್ಥಿಕತೆಯಲ್ಲಿ ಸ್ಥಿರತೆ ತರಲು ಕೋಶೀಯ ಮತ್ತು ತೆರಿಗೆ ಕ್ರಮಗಳ ಮೂಲಕ ಆದಾಯ ಮರುಹಂಚಿಕೆಯ ಯೋಜನೆಯನ್ನು ಜಾರಿಗೆ ತರಬೇಕೆಂದು ಕೇನ್ಸ್‌ರವರ ಅಭಿಪ್ರಾಯ.

## ಚಟುವಟಿಕೆ

1. ನಿಮ್ಮ ಪ್ರದೇಶದಲ್ಲಿ ಸರ್ಕಾರಿ ಮತ್ತು ಖಾಸಗಿ ಹೂಡಿಕೆಗಳ ಕ್ಷೇತ್ರಗಳನ್ನು ಪಟ್ಟಿ ಮಾಡಿ.

## ಅಭ್ಯಾಸ

I. **ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಅನುಭೋಗ ಎಂದರೇನು?
2. ಉಳಿತಾಯ ಎಂದರೇನು?
3. ಹೂಡಿಕೆಯ ಅರ್ಥ ನೀಡಿ.
4. ಸೀಮಾಂತ ಅನುಭೋಗ ಪ್ರವೃತ್ತಿಯ ಅರ್ಥ ನೀಡಿ.
5. ಗುಣಕ ಎಂದರೇನು?

II. **ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

1. ಕೇನ್ಸ್‌ರವರ ಪ್ರಕಾರ ಆದಾಯ ಎಂದರೇನು?
2. ಉಳಿತಾಯ ಹೂಡಿಕೆಗೆ ಹೇಗೆ ಸಮಾನವಾಗಿರುತ್ತದೆ?

3. ಗುಣಕ ಮತ್ತು ಸೀಮಾಂತ ಅನುಭೋಗ ಪ್ರವೃತ್ತಿಯ ನಡುವಿನ ಸಂಬಂಧ ವಿವರಿಸಿ.

4. ಪ್ರೇರಿತ ಮತ್ತು ಸ್ವಾಯತ್ತ ಹೂಡಿಕೆಯ ನಡುವಿನ ವ್ಯತ್ಯಾಸ ತಿಳಿಸಿ.

III. **ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಹದಿನೈದು ವಾಕ್ಯಗಳಲ್ಲಿ ಉತ್ತರಿಸಿ.**

1. ಹೂಡಿಕೆಯ ವಿಧಗಳನ್ನು ವಿವರಿಸಿ.
2. ಕೇನ್ಸ್‌ರವರ ಅನುಭೋಗ ಬಿಂಬಕವನ್ನು ವಿವರಿಸಿ.
3. ಕೇನ್ಸ್‌ರವರ ಹೂಡಿಕೆ ಬಿಂಬಕವನ್ನು ವಿವರಿಸಿ.
4. ಕೇನ್ಸ್‌ರವರ ಗುಣಕ ಪರಿಕಲ್ಪನೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

IV. **ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ನಲವತ್ತು ವಾಕ್ಯಗಳಲ್ಲಿ ಉತ್ತರಿಸಿ.**

1. ಉಳಿತಾಯ ಮತ್ತು ಹೂಡಿಕೆ ಪರಿಕಲ್ಪನೆಗಳನ್ನು ವಿವರಿಸಿ. ಉಳಿತಾಯ ಮತ್ತು ಹೂಡಿಕೆ ನಡುವಿನ ಸಮಾನತೆಯನ್ನು ಚರ್ಚಿಸಿ.
2. ಕೇನ್ಸ್‌ರವರ ಅನುಭೋಗ ಬಿಂಬಕವನ್ನು ವಿವರಿಸಿ.
3. ಹೂಡಿಕೆಯ ವಿಧಗಳು ಮತ್ತು ಹೂಡಿಕೆಯನ್ನು ನಿರ್ಧರಿಸುವ ಅಂಶಗಳನ್ನು ವಿವರಿಸಿ.

* * *

# ಅಧ್ಯಾಯ–11

# ಸರ್ಕಾರದ ಮುಂಗಡ ಪತ್ರ ಮತ್ತು ಆರ್ಥಿಕತೆ

## (GOVERNMENT BUDGET AND THE ECONOMY)


"ಮುಂಗಡ ಪತ್ರವು ಕೇವಲ ಆದಾಯ ಮತ್ತು ವೆಚ್ಚಗಳ ಯೋಜನೆ ಮಾತ್ರವಲ್ಲದೆ, ಭೌತಿಕ ಹಣಕಾಸಿನ ಪೂರ್ಣ ಸ್ಥಿತಿಯನ್ನು ಶಾಸಕಾಂಗದ ಮುಂದೆ ಮಂಡಿಸಿ ಸಚಿವಾಲಯದ ಹೇಳಿಕೆಯಲ್ಲಿ ಪ್ರಕಟ ಪಡಿಸಿದ ಸರ್ಕಾರದ ಹಣಕಾಸಿನ ವಿಚಾರಗಳ ಆಡಳಿತದ ನಿರ್ವಹಣೆಯಾಗಿದೆ" – **ಎಫ್. ಶಿರಾಸ್**

## 11.1 ಪೀಠಿಕೆ (INTRODUCTION)

ಹಿಂದಿನ ಅಧ್ಯಾಯದಲ್ಲಿ ನಾವು ಅನುಭೋಗ ಮತ್ತು ಹೂಡಿಕೆ ಬಿಂಬಕಗಳನ್ನು ಅಭ್ಯಸಿಸಿದ್ದೇವೆ. ಅವು ರಾಷ್ಟ್ರೀಯ ವರಮಾನದ ನಿರ್ಧಾರದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ರಾಷ್ಟ್ರೀಯ ವರಮಾನ ಆರ್ಥಿಕ ಕಲ್ಯಾಣದ ಒಂದು ಸೂಚಕ. ಆಧುನಿಕ ರಾಷ್ಟ್ರಗಳು ತಮ್ಮ ನಾಗರಿಕರ ಕಲ್ಯಾಣಕ್ಕಾಗಿ ಅಪಾರ ಸೌಲಭ್ಯಗಳನ್ನು ಕಲ್ಪಿಸಲು ಪ್ರಯತ್ನಿಸುತ್ತಿರುವುದರಿಂದ ಅವುಗಳನ್ನು ಕಲ್ಯಾಣ ರಾಷ್ಟ್ರಗಳೆಂದು ಕರೆಯುತ್ತಾರೆ. ಸರ್ಕಾರ ಹೇಗೆ ಈ ರೀತಿಯ ಸೌಲಭ್ಯಗಳನ್ನು ಒದಗಿಸುತ್ತದೆ? ಸರ್ಕಾರದ ಅದಾಯದ ಮೂಲಗಳು ಯಾವುವು? ಯಾವ ರೀತಿಯಲ್ಲಿ ಸರ್ಕಾರ ತನ್ನ ವರಮಾನವನ್ನು ವ್ಯಯಿಸುತ್ತದೆ? ಸರ್ಕಾರದ ಆದಾಯ ಮತ್ತು ವೆಚ್ಚ ಯಾವಾಗಲೂ ಸಮವಾಗಿರುತ್ತದೆಯೇ? ಇಲ್ಲವಾದಲ್ಲಿ ಕೊರತೆ ಹಣಕಾಸನ್ನು ಹೇಗೆ ತುಂಬಲಾಗುತ್ತದೆ? ವಿವಿಧ ಸನ್ನಿವೇಶಗಳಲ್ಲಿ ಸರ್ಕಾರ ಹೇಗೆ ಆರ್ಥಿಕ ಸ್ಥಿರತೆಯನ್ನು ಸಾಧಿಸುತ್ತದೆ? ಈ ಅಧ್ಯಾಯವನ್ನು ಅಭ್ಯಸಿಸಿದ ನಂತರ ನಾವು ಇಂತಹ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯವನ್ನು ಹೊಂದುವೆವು ಮತ್ತು ಮಿಶ್ರ ಆರ್ಥಿಕತೆಯಲ್ಲಿನ ಸರ್ಕಾರದ ಪಾತ್ರದ ಬಗ್ಗೆ ಅರ್ಥ ಮಾಡಿಕೊಳ್ಳುವೆವು.

ಮಿಶ್ರ ಆರ್ಥಿಕತೆಯಲ್ಲಿ ಹಣಕಾಸಿನ ಕಾರ್ಯಾಚರಣೆಗಳ ಮೂಲಕ ಸರ್ಕಾರ ಜನರ ಆರ್ಥಿಕ ಜೀವನದ ಮೇಲೆ ಪ್ರಭಾವ ಬೀರುತ್ತದೆ ಮತ್ತು ಸಾಮಾಜಿಕ ಕಲ್ಯಾಣವನ್ನು ಉತ್ತೇಜಿಸುತ್ತದೆ. ಅಂತಹ ಆರ್ಥಿಕತೆಯಲ್ಲಿ ಕೆಳಗಿನ

**ರಾಜಾ ಜೇಸುದಾಸ್ ಚೆಲ್ಲಯ್ಯ (12 ಡಿಸೆಂಬರ್ 1922–07 ಏಪ್ರಿಲ್ 2009)**ರವರು ಮದ್ರಾಸ್ ಅರ್ಥಶಾಸ್ತ್ರ



ಅಧ್ಯಯನ ಕೇಂದ್ರದ ಸಂಸ್ಥಾಪಕ ಅಧ್ಯಕ್ಷರು ಮತ್ತು ಅರ್ಥಶಾಸ್ತ್ರಜ್ಞರು. ಮದ್ರಾಸ್ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಸ್ನಾತಕೋತರ ಪದವಿ, ಪಿಟ್ಸ್‌ಬರ್ಗ್ ವಿಶ್ವವಿದ್ಯಾಲಯದಿಂದ ಪಿ.ಎಚ್‌ಡಿ ಪದವಿಯನ್ನು ಪಡೆದರು. ನಂತರ 1961–69ರ ನಡುವೆ ರಾಜಸ್ಥಾನ ವಿಶ್ವವಿದ್ಯಾಲಯ ಮತ್ತು ಉಸ್ಮಾನಿಯಾ ವಿಶ್ವವಿದ್ಯಾಲಯಗಳಲ್ಲಿ ರೀಡರ್, ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದ್ದರು. 1969–1975 ನಡುವೆ ಅಂತರರಾಷ್ಟ್ರೀಯ ಹಣಕಾಸು ನಿಧಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. 1985–90ರ ಅವಧಿಯಲ್ಲಿ ಯೋಜನಾ ಆಯೋಗದ ಸದಸ್ಯರಾಗಿ, 1987–89ರ ಅವಧಿಯಲ್ಲಿ ಹಣಕಾಸು ಆಯೋಗದ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವರು **'ಕೇಂದ್ರ ಸರ್ಕಾರದ ತೆರಿಗೆ ಸುಧಾರಣಾ ಸಮಿತಿ'**ಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. 2007ರಲ್ಲಿ ಇವರಿಗೆ **ಪದ್ಮವಿಭೂಷಣ ಗೌರವ** ಲಭಿಸಿದೆ.

ಉದ್ದೇಶಗಳನ್ನು ಈಡೇರಿಸಲು ಸರ್ಕಾರ ವಿವಿಧ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳ ಮೇಲಿನ ವೆಚ್ಚವನ್ನು ವಿವಿಧ ಮೂಲಗಳ ನಿರೀಕ್ಷಿತ ಆದಾಯಗಳಿಂದ ಅಂದಾಜಿಸುತ್ತದೆ :

1. ಅಪೇಕ್ಷಿತ ಸಾಮಾಜಿಕ ಮತ್ತು ಆರ್ಥಿಕ ಗುರಿಗಳನ್ನು ಸಾಧಿಸಲು ಸಂಪನ್ಮೂಲಗಳನ್ನು ಮರುಹಂಚಿಕೆ ಮಾಡುವುದು.
2. ಅಸಮಾನತೆಗಳನ್ನು ಕಡಿಮೆ ಮಾಡಲು ಸಾಮಾಜಿಕ ಭದ್ರತಾ ಯೋಜನೆ, ಸಾರ್ವಜನಿಕ ಕಾಮಗಾರಿ, ಆರ್ಥಿಕ ಸಹಾಯಧನಗಳ ಮೇಲೆ ವೆಚ್ಚ ಮಾಡುವ ಮೂಲಕ ವರಮಾನ ಮತ್ತು ಸಂಪತ್ತನ್ನು ಪುನರ್ ವಿತರಣೆ ಮಾಡುವುದು.
3. ಆರ್ಥಿಕ ಸ್ಥಿರತೆಯನ್ನು ಕಾಪಾಡಲು ಆರ್ಥಿಕ ಏರುಪೇರುಗಳನ್ನು ತಡೆಗಟ್ಟುವುದು.
4. ಸಾರ್ವಜನಿಕ ಉದ್ಯಮ ಸಂಸ್ಥೆಗಳ ನಿರ್ವಹಣೆಯ ಮೂಲಕ ಏಕಸ್ವಾಮ್ಯವನ್ನು ನಿಯಂತ್ರಿಸುವುದು ಮತ್ತು ಸಾಮಾಜಿಕ ಕಲ್ಯಾಣವನ್ನು ಸಾಧಿಸುವುದು.

ಮೇಲಿನ ಧ್ಯೇಯಗಳನ್ನು ಈಡೇರಿಸಲು ಸರ್ಕಾರ ಮುಂಗಡ ಪತ್ರವನ್ನು ಸಿದ್ಧಪಡಿಸುತ್ತದೆ.

## 11.2 ಮುಂಗಡ ಪತ್ರ – ಅರ್ಥ, ವಿಧಗಳು, ಭಾಗಗಳು (BUDGET – MEANING, TYPES, COMPONENTS)

'ಬಜೆಟ್' ಎಂಬ ಆಂಗ್ಲ ಪದವನ್ನು 'ಬುಗಟ್' (Bougette) ಎಂಬ ಫ್ರೆಂಚ್ ಪದದಿಂದ ಪಡೆಯಲಾಗಿದೆ. ಈ ಪದದ ಅರ್ಥ ಹಣಕಾಸಿನ ಪತ್ರಗಳನ್ನು ಹೊಂದಿರುವ 'ಚರ್ಮದ ಚೀಲ'. **ಸರ್ಕಾರದ ಮುಂಬರುವ ಹಣಕಾಸಿನ ವರ್ಷದ ನಿರೀಕ್ಷಿತ ಆದಾಯ ಮತ್ತು ವೆಚ್ಚದ ವಿವರಗಳನ್ನು ಹೊಂದಿರುವ ಪಟ್ಟಿಯನ್ನು ಮುಂಗಡ ಪತ್ರ ಎನ್ನುತ್ತೇವೆ.** ಡಬ್ಲ್ಯೂ. ಇ. ವಿಲ್ಲೋಬಿ ಪ್ರಕಾರ, "ಮುಂಗಡ ಪತ್ರವು ಏಕಕಾಲದಲ್ಲಿ ಒಂದು ವರದಿ; ಅಂದಾಜು ಮತ್ತು ಪ್ರಸ್ತಾವನೆ; ಎಲ್ಲಾ ಆರ್ಥಿಕ ಆಡಳಿತವನ್ನು ಸರಿಪಡಿಸುವ, ಹೋಲಿಸುವ ಮತ್ತು ಹೊಂದಿಸುವ ಒಂದು ಸಾಧನವಾಗಿದೆ".

ಸರ್ಕಾರವು ನಾಗರಿಕರ ಕಲ್ಯಾಣಕ್ಕಾಗಿ ಹಲವು ಸಾಮಾಜಿಕ, ಆರ್ಥಿಕ ಹಾಗೂ ಇತರೆ ಚಟುವಟಿಕೆಗಳನ್ನು ಕೈಗೊಳ್ಳುವ ಅವಶ್ಯಕತೆ ಇದೆ. ಇವುಗಳ ಜೊತೆಗೆ ಸರ್ಕಾರವು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಹಲವಾರು ನೀತಿಗಳನ್ನು ಜಾರಿಗೊಳಿಸಬೇಕಾಗಿದ್ದು ಇದಕ್ಕಾಗಿ ವೆಚ್ಚಗಳನ್ನು ಭರಿಸಬೇಕಾಗುತ್ತದೆ. ಹೀಗಾಗಿ ಸರ್ಕಾರವು ವೆಚ್ಚಗಳನ್ನು ಭರಿಸಲು ಅವಶ್ಯಕವಿರುವ ಆದಾಯವನ್ನು ಸಂಗ್ರಹಿಸುತ್ತದೆ. ಮುಂಗಡ ಪತ್ರವು ಮುಂಬರುವ ಹಣಕಾಸಿನ ವರ್ಷದ ಬಜೆಟ್ ಅಂದಾಜು, ಪ್ರಸಕ್ತ ವರ್ಷದ ಬಜೆಟ್ ಅಂದಾಜು ಮತ್ತು ಪರಿಷ್ಕೃತ ಅಂದಾಜುಗಳೊಂದಿಗೆ ಹಿಂದಿನ ವರ್ಷದ ನೈಜ ಹಣಕಾಸಿನ ಲೆಕ್ಕಾಚಾರಗಳನ್ನು ಒದಗಿಸುತ್ತದೆ.

ಮುಂಗಡ ಪತ್ರವನ್ನು ಮೂರು ಪ್ರಕಾರಗಳಲ್ಲಿ ವರ್ಗೀಕರಿಸಬಹುದು. ಅವುಗಳೆಂದರೆ ಉಳಿತಾಯ ಮುಂಗಡಪತ್ರ, ಕೊರತೆಯ ಮುಂಗಡಪತ್ರ ಮತ್ತು ಸಮತೋಲಿತ ಮುಂಗಡಪತ್ರ

**1. ಉಳಿತಾಯ ಮುಂಗಡ ಪತ್ರ** (Surplus Budget) **: ವರ್ಷವೊಂದರ ಸರ್ಕಾರದ ನಿರೀಕ್ಷಿತ ಆದಾಯವು ನಿರೀಕ್ಷಿತ ವೆಚ್ಚಕ್ಕಿಂತ ಅಧಿಕವಿದ್ದರೆ ಅದನ್ನು ಉಳಿತಾಯ ಮುಂಗಡ ಪತ್ರ ಎನ್ನುತ್ತೇವೆ.** ಇದು ಸರ್ಕಾರದ ಆರ್ಥಿಕ ಸುಸ್ಥಿತಿಯನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಮಿಗುತೆ ಮುಂಗಡ ಪತ್ರವನ್ನು ತಯಾರಿಸುವ ಯೋಜನೆ ಹೊಂದಿರುತ್ತವೆ. ಕೆಲವೊಮ್ಮೆ ಇದು ಸಾಮಾಜಿಕ ಕಲ್ಯಾಣದ ದೃಷ್ಟಿಯಲ್ಲಿ ನಕಾರಾತ್ಮಕ ಪ್ರಭಾವವನ್ನು ಬೀರುತ್ತದೆ. ಇದು ಸರ್ಕಾರವು ಸಂಪನ್ಮೂಲಗಳನ್ನು ಜನರ ಕಲ್ಯಾಣಕ್ಕಾಗಿ ಖರ್ಚು ಮಾಡುವ ಬದಲಾಗಿ ಅದರಿಂದ ಸಂಪತ್ತನ್ನು ಸಂಗ್ರಹಿಸುವುದರಲ್ಲಿ ತಲ್ಲೀನವಾಗಿದೆ ಎಂಬುದನ್ನು ಅರ್ಥೈಸುತ್ತದೆ.


**2. ಕೊರತೆಯ ಮುಂಗಡ ಪತ್ರ** (Deficit Budget) **: ವರ್ಷವೊಂದರ ಸರ್ಕಾರದ ನಿರೀಕ್ಷಿತ ವೆಚ್ಚವು ನಿರೀಕ್ಷಿತ ಆದಾಯಕ್ಕಿಂತ ಅಧಿಕವಿದ್ದರೆ ಅದನ್ನು ಕೊರತೆಯ ಮುಂಗಡ ಪತ್ರ ಎನ್ನುತ್ತೇವೆ.** ಇದು ಆರ್ಥಿಕತೆಯನ್ನು ಆರ್ಥಿಕ ಬೆಳವಣಿಗೆಯ ಪಥದಲ್ಲಿ ಕೊಂಡೊಯ್ಯಲು ಸರ್ಕಾರವು ಉದ್ದೇಶ ಪೂರ್ವಕವಾಗಿ ಮಾಡುವ ತನ್ನ ಆದಾಯಕ್ಕಿಂತ ಹೆಚ್ಚಿನ ವೆಚ್ಚವನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳ ಸರ್ಕಾರಗಳು ಕೊರತೆ ಮುಂಗಡ ಪತ್ರವನ್ನು ತಯಾರಿಸುವ ಯೋಜನೆ ಹೊಂದಿರುತ್ತವೆ. 1930ರ ಮಹಾ ಆರ್ಥಿಕ ಮುಗ್ಗಟ್ಟಿನ ನಂತರ, ಕೊರತೆ ಮುಂಗಡ ಪತ್ರ ಜನಪ್ರಿಯವಾಗತೊಡಗಿದೆ. ಈ ಮಹಾ ಆರ್ಥಿಕ ಮುಗ್ಗಟ್ಟಿನ ಹೊಡೆತದಿಂದ ಹೊರಬರಲು ಸರ್ಕಾರ ಉದ್ದೇಶ ಪೂರ್ವಕವಾಗಿ ಆದಾಯಕ್ಕಿಂತ ಅಧಿಕ ವೆಚ್ಚದ ನೀತಿಗೆ ಆದ್ಯತೆ ನೀಡಬೇಕೆಂದು ಭಾವಿಸಿತ್ತು.

**3. ಸಮತೋಲಿತ ಮುಂಗಡ ಪತ್ರ** (Balanced Budget)**: ವರ್ಷವೊಂದರ ಸರ್ಕಾರದ ನಿರೀಕ್ಷಿತ ಆದಾಯವು ನಿರೀಕ್ಷಿತ ವೆಚ್ಚಕ್ಕೆ ಸಮನಾಗಿದ್ದರೆ ಅದನ್ನು ಸಮತೋಲಿತ ಮುಂಗಡ ಪತ್ರ ಎನ್ನುತ್ತೇವೆ.** ಇದು ಸರ್ಕಾರವು ಆದಾಯದ ಮೂಲಕ ಸಂಗ್ರಹಿಸಿದ ಮೊತ್ತವನ್ನಷ್ಟೇ ಖರ್ಚು ಮಾಡುವುದನ್ನು ಸೂಚಿಸುತ್ತದೆ. ಇಂತಹ ಮುಂಗಡ ಪತ್ರವು ಆರ್ಥಿಕ ಚಟುವಟಿಕೆಯ ಮೇಲೆ ನಿರ್ಲಿಪ್ತ ಪರಿಣಾಮ ಬೀರುತ್ತದೆ. ಆದುದರಿಂದ, ಪ್ರಸ್ತುತ ವಿಶ್ವದ ಆರ್ಥಿಕತೆಗಳು ಅಪರೂಪಕ್ಕೊಮ್ಮೆ ಸಮತೋಲಿತ ಮುಂಗಡ ಪತ್ರವನ್ನು ತಯಾರಿಸುವ ಯೋಜನೆ ಹೊಂದುತ್ತವೆ. 'ಸಂಪನ್ಮೂಲದ ಮಿತಿಯೊಳಗೆ ಜೀವಿಸಿ" ಎಂಬ ತತ್ವದ ಮೇರೆಗೆ, ಬಹುತೇಕ ಸಾಂಪ್ರದಾಯ ಅರ್ಥಶಾಸ್ತ್ರಜ್ಞರು ಸಮತೋಲಿತ ಮುಂಗಡ ಪತ್ರಕ್ಕೆ ಒಲವು ತೋರಿಸಿದ್ದರು. ಏಕೆಂದರೆ, ಆರ್ಥಿಕ ಚಟುವಟಿಕೆಗಳಲ್ಲಿ ಕನಿಷ್ಠ ಪ್ರಮಾಣದ ಹಸ್ತಕ್ಷೇಪವನ್ನು ಸರ್ಕಾರದಿಂದ ಅಪೇಕ್ಷಿಸಲಾಗಿತ್ತು.

**ಮುಂಗಡ ಪತ್ರದ ಭಾಗಗಳು** (Components Of The Budget): ಮುಂಗಡ ಪತ್ರವು **ಅ) ಕಂದಾಯ ಖಾತೆ** ಮತ್ತು **ಬ) ಬಂಡವಾಳ ಖಾತೆ** ಎಂಬ ಎರಡು ಭಾಗಗಳನ್ನು ಹೊಂದಿದೆ.

**ಪಟ 11.1**

**ಸರ್ಕಾರದ ಮುಂಗಡ ಪತ್ರ** (GOVERNMENT BUDGET)




**ಅ) ಕಂದಾಯ ಖಾತೆ** (Revenue Account) **:** ಕಂದಾಯ ಖಾತೆಯಲ್ಲಿ ಸರ್ಕಾರದ 1. ಕಂದಾಯ ಸ್ವೀಕೃತಿ ಮತ್ತು 2. ಕಂದಾಯ ವೆಚ್ಚಗಳು ಸೇರಿವೆ.

**1. ಕಂದಾಯ ಸ್ವೀಕೃತಿ :** ಸರ್ಕಾರವು ತೆರಿಗೆ ಮತ್ತು ತೆರಿಗೆಯೇತರ ಮೂಲಗಳಿಂದ ಗಳಿಸುವ ಆದಾಯಗಳನ್ನು ಕಂದಾಯ ಸ್ವೀಕೃತಿ ಎನ್ನುತ್ತೇವೆ.

**ತೆರಿಗೆ ಆದಾಯ** (Tax Revenues) : ತೆರಿಗೆ ಆದಾಯವು ಸರ್ಕಾರ ವಿಧಿಸುವ ತೆರಿಗೆಗಳು ಮತ್ತು ಸುಂಕಗಳಿಂದ ಬರುವ ಆದಾಯವನ್ನು ಒಳಗೊಂಡಿದೆ. **ಯಾವುದೇ ನೇರ ಪ್ರತಿಪಲಾಪೇಕ್ಷೆಯಿಲ್ಲದೇ ಸಾರ್ವಜನಿಕರು ಸರ್ಕಾರಕ್ಕೆ ಕಡ್ಡಾಯವಾಗಿ ಪಾವತಿಸಬೇಕಾದ ವಂತಿಕೆಯನ್ನು ತೆರಿಗೆ ಎನ್ನುತ್ತೇವೆ.** ಕಂದಾಯ ಸ್ವೀಕೃತಿಯ ಒಂದು ಪ್ರಮುಖ ಭಾಗವಾಗಿರುವ ತೆರಿಗೆ ಆದಾಯವು ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆಗಳನ್ನು ಒಳಗೊಂಡಿದೆ. ಸರ್ಕಾರ ಯಾರ ಮೇಲೆ ತೆರಿಗೆಯನ್ನು ವಿಧಿಸಿರುತ್ತದೆಯೊ, ಆತನೇ ತೆರಿಗೆಯ ಪ್ರಭಾವ ಮತ್ತು ಭಾರವನ್ನು ಹೊಂದಿರುವಂತಿದ್ದರೆ ಅದನ್ನು ಪ್ರತ್ಯಕ್ಷ ತೆರಿಗೆ ಎನ್ನುತ್ತೇವೆ. ಇದನ್ನು ಆದಾಯ ಮತ್ತು ಸಂಪತ್ತಿನ ಮೇಲೆ ವಿಧಿಸಲಾಗುತ್ತದೆ. ಉದಾಹರಣೆಗೆ, ವೈಯಕ್ತಿಕ ಆದಾಯ ತೆರಿಗೆ, ಸಂಪತ್ತಿನ ತೆರಿಗೆ, ಬಡ್ಡಿ ತೆರಿಗೆ, ಕಂಪನಿ ತೆರಿಗೆ, ವೃತ್ತಿ ತೆರಿಗೆ ಇತ್ಯಾದಿಗಳು. ತೆರಿಗೆಯ ಪ್ರಭಾವ ಮತ್ತು ಭಾರವನ್ನು ಬೇರೆ ಬೇರೆ ವ್ಯಕ್ತಿಗಳು ಭರಿಸುವಂತಿದ್ದರೆ ಅದನ್ನು ಪರೋಕ್ಷ ತೆರಿಗೆ ಎನ್ನುತ್ತೇವೆ. ಇಂತಹ ತೆರಿಗೆಯ ಭಾರವನ್ನು ಬೇರೆಯವರ ಮೇಲೆ ವರ್ಗಾಯಿಸಲಾಗುತ್ತದೆ. ಇದನ್ನು ಸರಕು ಮತ್ತು ಸೇವೆಗಳ ಮೇಲೆ ವಿಧಿಸಲಾಗುತ್ತದೆ. ಉದಾಹರಣೆಗೆ, ಅಬಕಾರಿ ಸುಂಕ, ಆಮದು–ರಫ್ತು ಸುಂಕ, ಸೇವಾ ತೆರಿಗೆ, ಮೌಲ್ಯವರ್ಧಿತ ತೆರಿಗೆ (VAT) ಇತ್ಯಾದಿಗಳು.

**ಮೌಲ್ಯವರ್ಧಿತ ತೆರಿಗೆ** (VALUE ADDED TAX) : ಮೌಲ್ಯವರ್ಧಿತ ತೆರಿಗೆಯನ್ನು ಜಗತ್ತಿನಲ್ಲಿ ಮೊದಲ ಬಾರಿಗೆ ಪರಿಚಯಿಸಿದ ಮೊದಲ ರಾಷ್ಟ್ರ ಫ್ರಾನ್ಸ್ (1954). ಇದನ್ನು ಭಾರತ 1 ಏಪ್ರಿಲ್ 2005 ರಿಂದ ಝಾ ಸಮಿತಿಯ (1978) ಶಿಫಾರಸ್ಸಿನ ಮೇರೆಗೆ ಪರಿಚಯಿಸಿತು. ಮೌಲ್ಯವರ್ಧಿತ ತೆರಿಗೆಯನ್ನು ಸರಕು ಮತ್ತು ಸೇವೆಗಳ (ರಫ್ತು ಮತ್ತು ಸರ್ಕಾರಿ ಸೇವೆಗಳನ್ನು ಹೊರತು ಪಡಿಸಿ) ಉತ್ಪಾದನೆ ಮತ್ತು ವಿತರಣೆಯ ಪ್ರತಿ ಹಂತದಲ್ಲಿ ಸೇರ್ಪಡೆಯಾಗುವ ಮೌಲ್ಯದ ಮೇಲೆ ವಿಧಿಸಲಾಗುತ್ತದೆ. ಇದು ಸ್ಥಳೀಯ ಮಾರಾಟ ತೆರಿಗೆಯ ಬದಲಿ ಪರೋಕ್ಷ ತೆರಿಗೆಯಾಗಿದೆ. ಮಾರ್ಪಾಡಿತ ಮೌಲ್ಯವರ್ಧಿತ ತೆರಿಗೆ ಪದ್ಧತಿ (MODVAT)ಯೇ ಮೌಲ್ಯವರ್ಧಿತ ತೆರಿಗೆ. ಇದನ್ನು ಭಾರತದಲ್ಲಿ 1986ರ ಮಾರ್ಚ್ 1 ರಂದು ಜಾರಿಗೆ ತರಲಾಯಿತು. ಈ ಪದ್ಧತಿಯು ಅಂತಿಮ/ಸಿದ್ಧ ಸರಕುಗಳ ಉತ್ಪಾದನೆಯಲ್ಲಿ ಬಳಸಲ್ಪಟ್ಟ ಕಚ್ಚಾ ಪದಾರ್ಥಗಳಿಗಾಗಿ ಈಗಾಗಲೇ ಪಾವತಿಸಿದ ಅಬಕಾರಿ ತೆರಿಗೆಯನ್ನು ಪೂರ್ಣವಾಗಿ ಹಿಂಪಡೆಯಲು ಅವಕಾಶ ಮಾಡಿಕೊಡುತ್ತದೆ. ಮೊಡ್‌ವ್ಯಾಟ್ ಪದ್ಧತಿಯನ್ನು ಬದಲಾಯಿಸಿ ಕೇಂದ್ರಿಯ ಮೌಲ್ಯವರ್ಧಿತ ತೆರಿಗೆ (CENVAT) 2000ರ ಏಪ್ರಿಲ್ 1 ರಂದು ಜಾರಿಗೆ ತರಲಾಯಿತು. ಉತ್ಪಾದನಾ ಸಂದರ್ಭದಲ್ಲಿ ಉತ್ಪಾದಕ ತಾನು ಸರಕುಗಳ ಮೌಲ್ಯವನ್ನು ಹೆಚ್ಚಿಸುವುದಕ್ಕಾಗಿ ಪಾವತಿಸುವ ತೆರಿಗೆಯನ್ನು ಕೇಂದ್ರೀಯ ಮೌಲ್ಯವರ್ಧಿತ ತೆರಿಗೆ ಎನ್ನಬಹುದು. ಉದಾಹರಣೆಗೆ: ಒಬ್ಬ ಉತ್ಪಾದಕ ಕೆಲವು ಕಚ್ಚಾ ಪದಾರ್ಥಗಳನ್ನು ಖರೀದಿಸಿ ಅವುಗಳನ್ನು ಸಿದ್ಧ ವಸ್ತುಗಳಾಗಿ ಪರಿವರ್ತಿಸುತ್ತಾನೆ ಎಂದಾದರೆ ಆತ ಉತ್ಪಾದನೆಯ ಸಂದರ್ಭದಲ್ಲಿ ಸೇರ್ಪಡೆಯಾಗುವ ಹೆಚ್ಚುವರಿ ಮೌಲ್ಯಕ್ಕೆ ಮಾತ್ರವೇ ತೆರಿಗೆ ಪಾವತಿಸಬೇಕೆ ಹೊರತು ಸಿದ್ಧ ಪದಾರ್ಥಗಳ ಮೌಲ್ಯದ ಮೇಲಲ್ಲ.

ಆದಾಯ ಹೆಚ್ಚಿದಂತೆ ತೆರಿಗೆಯ ದರ ಹೆಚ್ಚಳವಾಗುವ ತೆರಿಗೆಯ ಪದ್ಧತಿಯನ್ನು ಪುರೋಗಾಮಿ ತೆರಿಗೆ ಪದ್ಧತಿ ಎನ್ನುತ್ತೇವೆ. ಇದನ್ನು ಒಂದು ದೇಶದಲ್ಲಿ ಆದಾಯದ ಪುನರ್ ಹಂಚಿಕೆ ಹಾಗೂ ಆರ್ಥಿಕ ಸಮಾನತೆಯನ್ನು ತರುವ ಒಂದು ಪ್ರಮುಖ ತಂತ್ರವೆಂದು ಪರಿಗಣಿಸಲಾಗಿದೆ. ಉದಾಹರಣೆಗೆ ಭಾರತದಲ್ಲಿ ವಿವಿಧ ಹಂತಗಳಲ್ಲಿ ವಿಭಿನ್ನ ಆದಾಯ ತೆರಿಗೆ ದರಗಳನ್ನು ವಿಧಿಸಲಾಗಿದೆ. ತೆರಿಗೆಯ ದರಗಳಲ್ಲಿನ ಬದಲಾವಣೆಯು ಜನರು ವ್ಯಯಿಸಬಹುದಾದ ವರಮಾನ ಮತ್ತು ಅನುಭೋಗ ವೆಚ್ಚದಲ್ಲಿ ಬದಲಾವಣೆ ತರುತ್ತದೆ.

**ತೆರಿಗೆಯೇತರ ಆದಾಯ** (Non Tax Revenue) : ತೆರಿಗೆಗಳನ್ನು ಹೊರತು ಪಡಿಸಿ ಇತರೆ ಮೂಲಗಳಿಂದ ಸಂಗ್ರಹಿಸುವ ಆದಾಯವನ್ನು ತೆರಿಗೆಯೇತರ ಆದಾಯ ಎನ್ನುತ್ತೇವೆ. ಇದು ಬಡ್ಡಿ ಸ್ವೀಕೃತಿ, ಸಾರ್ವಜನಿಕ ಉದ್ಯಮ ಸಂಸ್ಥೆಗಳ ಲಾಭಗಳು, ನೋಟುಗಳ ಮುದ್ರಣ ಮತ್ತು ಟಂಕಸಾಲೆಯ ಆದಾಯ, ಶುಲ್ಕಗಳು, ದಂಡಗಳು ಮತ್ತು ಜುಲ್ಮಾನೆಗಳು, ವಿದೇಶಗಳ ಮತ್ತು ಅಂತಾರಾಷ್ಟ್ರೀಯ ಸಂಘಟನೆಗಳ ಅನುದಾನಗಳನ್ನು ಒಳಗೊಂಡಿದೆ.